The Motion was adopted.

Clause by clause consideration

CLAUSE 2 and 3

"That Clause 2 and 3 both inclusive do stand part of the Bill"

The Motion was adopted.

Clauses 2 and 3 both inclusive were added to the Bill.

CLAUSE 1 Etc.

MR. SPEAKER.—The question is.--

"That Clause I, Long Title, the Preamble and the Enacting Formula do stand part of the Bill."

The Motion was adoted.

Clause I, Long Title, the Preamble and the Enacting Formula were added to the Bill.

MOTION TO PASS

SRI A. LASKMISAGAR (Mister for low and parly Affairs :—Sir I, beg to move that The Karnataka Contingency Fund (Amendment) Bill, 1984 be passed.

MR. SPEAKER.—The question is :

"That the Karnataka Contingency Fund (Amendment) Bill, 1984 be passed."

The Motion was adopted and the Bill was passed.

MR. SPEAKER.---Now, further discussion on the Karnataka Zilla Parishad, Taluk Panchayat Samities, Mandal Panchayats and Nyaya Panchayats Bill, 1983.

† ಶ್ರೀ ವೈ. ರಾಮಕೃಷ್ಣ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಭೆಯಲ್ಲಿ ಚರ್ಚೆ ಆಗತಕ್ಕಂಥ ಮಸೂದೆ ಅತಿ ಮುಖ್ಯವಾದ ಮಸೂದೆಗಳ ಪೈಕಿ ಒಂದಾಗಿದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಗ್ರಾಮಾಂತರ ಪ್ರದೇಶಗಳ ಆಡಳಿತ ನಿರ್ವಹಣೆ ಯೋಗ್ಯ ರೀತಿಯಲ್ಲಿ ಇರಬೇಕು, ಯಾವ ಸಂಸ್ಥೆಗಳು ನಡೆಸಬೇಕು, ಅಲ್ಲಿರತಕ್ಕಂಥ ಜನರಿಗೆ ಎಷ್ಟರಮಟ್ಟಿಗೆ ನಾವು ಹಕ್ಕನ್ನು ಕೊಡಬೇಕು. ಈ ವಿಚಾರಗಳ ಬಗ್ಗೆ ನಮ್ಮ ಮಂತ್ರಿಗಳು ಈ ಮಸೂದೆಯನ್ನು ಮಂಡಿಸಿದ್ದಾರೆ. ಈ ಮಸೂದೆಯನ್ನು ಮೊದಲೇನೇ ಅವರು ಬಹಳ ಕಸರತ್ತು ಮಾಡಿದ ಹಾಗೆ ಕಾಣುತ್ತದೆ. ಬಲವಂತರಾಯ್ ಮೆಹತಾ ಕಮಿಟಿ, ಅಶೋಕ ಮೆಹ್ತಾ ಕಮಿಟಿ, ಎಸ್. ಕೆ. ಡೇ ಕಮಿಟಿ ರಿಪೋರ್ಟ್‌ಗಳನ್ನು ಅವರು ಬಹಳವಾಗಿ ಓದಿಕೊಂಡಿದ್ದಾರೆ. ಬಹುಶಃ ನಮ್ಮ ರಾಷ್ಟ್ರದಲ್ಲಿ ಎಷ್ಟೆಷ್ಟು ರಿಪೋರ್ಟುಗಳು ಈ ಮಸೂದೆಯ ಮೇಲೆ ತಯಾರಾಗಿದ್ದವು, ಈ ಎಲ್ಲಾ ರಿಪೋರ್ಟ್‌ಗಳನ್ನು ಅವರು ಓದಿ ಬಿಟ್ಟಿದ್ದಾರೆ. ಈ ರಿಪೋರ್ಟುಗಳನ್ನು ಜಾಸ್ತಿ ಓದಿ ಅವರ ಮನಸ್ಸಿನಲ್ಲಿ ಅವರು ಈಗ ಯಾವ ಲೋಕದಲ್ಲಿ ಇದ್ದಾರೆ ಎಂದರೆ ಗಗನ ಕುಸುಮದಂತೆ ಈ ಮಸೂದೆಯ ಬಲೆಯಲ್ಲಿ ಬಿದ್ದಿದ್ದಾರೆ. ಈ ಮಸೂದೆಯಲ್ಲಿ ಅಡಕವಾಗಿರತಕ್ಕಂಥ ಎಲ್ಲಾ ಮಂಡಲ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪರಿಷತ್ತು ಮತ್ತು ನ್ಯಾಯ ಪಂಚಾಯತ್ ಎಲ್ಲವನ್ನೂ ಕೂಡ ಬಹಳ ಸುಗಮವಾಗಿ ಜಾರಿಗೆ ತಂದುಬಿಡಬಹುದು, ಅನುಷ್ಠಾನಕ್ಕೆ ತಂದುಬಿಡಬಹುದು ಮತ್ತು ಇದರ ಮೂಲಕ ಜನತೆಯ ಕಲ್ಯಾಣವಾಗುತ್ತದೆ ಎಂದು ಅವರು ಭಾವಿಸಿದ್ದಾರೆ. ಆದರೆ, ಅವರ ಒಂದು ಪ್ರಾಮಾಣಿಕ ಮನೋಭಾವ ಏನಿದೆ ಅದನ್ನು ಪ್ರಶ್ನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಅವರನ್ನು ಅಭಿನಂದಿಸುತ್ತೇನೆ.

ಬಹಳ ಆಳವಾಗಿ ಅಧ್ಯಯನ ಮಾಡಿದ್ದಾರೆ, ಯಾವ್ಯಾವ ರಾಜ್ಯಗಳಲ್ಲಿ ಯಾವ್ಯಾವ ರೀತಿಯಿಂದ ಈ ಕಾನೂನು ಕೆಲಸ ಮಾಡುತ್ತಿದೆ ಎಂಬ ಬಗ್ಗೆ ಪರಿಚಯ ಮಾಡಿಕೊಂಡು ಬಂದಿದ್ದಾರೆ. ಮತ್ತು ಇದರ ಪರಿಣಾಮವಾಗಿ ಉತ್ತಮವಾದ ರಿಪೋರ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. It is very good to be preserved in library. They will definitely come to know this when they will actually implement it ಅಧ್ಯಕ್ಷರೇ, ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಜಿಲ್ಲಾ ಪರಿಷತ್ತು, ಎಂದೇನು ಬಿಲ್ಲನ್ನು ಸಿದ್ಧ ಮಾಡಿಕೊಂಡು ಬಂದಿದ್ದಾರೆ, ಇದು ಹಿಂದೆ ಹಳೇ ಮೈಸೂರಿನಲ್ಲಿ ಜಾರಿಯಲ್ಲಿತ್ತು. ನಾನು ಆಗ ಸೆಂಟ್ರಲ್ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್‌ನಲ್ಲಿ ಸಭೆ ಸೇರುತ್ತಿದ್ದರು. ದಿವಂಗತ ಕುರಿಯರೆಡ್ಡಿಯವರು ಇದಕ್ಕೆ ಚೇರ್ಮನ್ ಆಗಿದ್ದರು. ಲಕ್ಷ್ಮೀದೇವ್ ರಾಮನ್ ಅವರು ಉಪಾಧ್ಯಕ್ಷರಾಗಿದ್ದರು. ಇದನ್ನು ನಾವು ನೋಡುತ್ತಿದ್ದೆವು. ಈ ಜಿಲ್ಲಾ ಪರಿಷತ್ತಿನಿಂದ ಏನು ಕೆಲಸ ಸಾಧನೆ ಆಯಿತೆಂದು ಕೇಳಬೇಡಿ, ಅವರು ಏನು ನಿರೀಕ್ಷೆ ಮಾಡಿದ್ದರೋ ಅದೇ ತರಹದ ನಿರೀಕ್ಷೆಯನ್ನು ಇವರು ಮಾಡಿದ್ದಾರೆ. ಜಿಲ್ಲಾ ಪರಿಷತ್ತು ಅಷ್ಟು ಸುಲಭವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಬಹಳ ಅಡ್ಡಿ ಆತಂಕಗಳು ಬರುತ್ತವೆ. ಈ ಅಡ್ಡಿ ಆತಂಕಗಳು ಏನೆಂಬುದನ್ನು ನಾನು ಮುಂದೆ ಹೇಳುತ್ತೇನೆ. ಇದೇ ತರಹ ನ್ಯಾಯ ಪಂಚಾಯತ್ ಕೂಡ ನಮ್ಮ ಕರ್ನಾಟಕದಲ್ಲಿ ಇತ್ತು. ಬೊಂಬಾಯಿ ಕರ್ನಾಟಕದಲ್ಲಿ ಇದು ಇತ್ತು. ಯಾವ್ಯಾವ ಜಿಲ್ಲೆಗಳು ಬೊಂಬಾಯಿ ಕರ್ನಾಟಕಕ್ಕೆ ಸೇರಿದ್ದವೋ, ಅಲ್ಲಿ ಇದು ಇತ್ತು. ಆದರೆ ಇವೆಲ್ಲವೂ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದವಾ ? why they have become defunct ? ನಿನ್ನೆ ಅವರು ಇದನ್ನು ಇಂಟ್ರೊಡ್ಯೂಸ್ ಮಾಡುವಾಗ ಮಾಡಿದ ಭಾಷಣ ಚೆನ್ನಾಗಿ ಇತ್ತು. ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ ಏನೆಂದರೆ ಇಷ್ಟು ಆಳವಾಗಿ ಅಧ್ಯಯನ ಮಾಡಿದ್ದೀರಿ, ಇಷ್ಟು ರಾಜ್ಯಗಳನ್ನು ಸುತ್ತಿದ್ದೀರಿ. ಯಾವುದಾದರೂ ಒಂದು ರಾಜ್ಯದಲ್ಲಿ ನ್ಯಾಯ ಪಂಚಾಯತ್ ಚೆನ್ನಾಗಿ ಕೆಲಸ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ? ತಾವು ಹೇಳುತ್ತೀರಿ–It is your wishful thinking... ಎಂದು ನ್ಯಾಯ ಪಂಚಾಯತ್ ಏನಿದೆ ಅದನ್ನು ಅಡ್ಮಿಟ್ ಮಾಡಿಕೊಂಡಿದ್ದೀರಿ. Decentralisation even in delivering social justice to the rural poor. But could it be done in the present circumstances is the question. ಇದನ್ನು ಮಾಡಲಿಕ್ಕೆ ಸಾಧ್ಯ ಇದೆಯೆ ? ಯಾವ ಕಾರಣಗಳಿಂದ ಇದು ಬೇರೆ ರಾಜ್ಯಗಳಲ್ಲಿ ವಿಫಲವಾಗಿದೆಯೋ, ಇದನ್ನು ಅನುಷ್ಠಾನಕ್ಕೆ ತರಲಾಗಲಿಲ್ಲವೋ ಅದೇ ಕಾರಣದಿಂದ ಇಲ್ಲೂ ಕೂಡ ಅದು ಸರಿಯಾಗಿ ಆಗುವುದಿಲ್ಲ. ನಾವೆಲ್ಲರೂ ಒಂದೇ ರಾಷ್ಟ್ರಕ್ಕೆ ಸೇರಿದಂಥ ಜನ. ನಮ್ಮ ಸಮಸ್ಯೆಗಳು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಒಂದೇ ಸಮನಾಗಿರುತ್ತವೆ. ನಮ್ಮಲ್ಲಿರತಕ್ಕಂಥ ಜಾತೀಯತೆ ನಮ್ಮಲ್ಲಿರತಕ್ಕಂಥ ಬಡತನ, ಏರು ಪೇರು ಇವುಗಳ ದೆಸೆಯಿಂದ ಯಾವ ರಾಜ್ಯಗಳಲ್ಲೂ ಕೂಡ ಇದನ್ನು ಕಾನೂನು ಮಾಡಿ ಜಾರಿಗೆ ತರುವುದಕ್ಕೆ ಆಗುವುದಿಲ್ಲ. ಇದೇ ಕಾರಣದಿಂದ ಈ ರಾಜ್ಯದಲ್ಲಿ ಕಾನೂನು ಮಾಡಿ ಇದನ್ನು ತರಲಾಗದು ಎನ್ನತಕ್ಕಂಥ ಸ್ಪಷ್ಟವಾದ ಮನೋಭಾವಕ್ಕೆ ನಾನು ಬಂದಿದ್ದೇನೆ. ಅದಕ್ಕೋಸ್ಕರವಾಗಿ ತಾವು ಏನಾದರೂ ಈ ರೀತಿಯಿಂದ ನ್ಯಾಯ ಪಂಚಾಯತ್‌ನ್ನು ತೆಗೆದುಕೊಂಡು ಬಂದು ಇದನ್ನು ಯಶಸ್ವಿಯಾಗಿ ಮಾಡುತ್ತೇವೆ ಎಂದು ಹೇಳಿದರೆ ಅದು ಸಾಧ್ಯವಾಗಲಾರದು. ಆದಕಾರಣ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಇದನ್ನು ನೀವು ತರಲೇಬೇಕು ಎಂದು ಮನಸ್ಸು ಮಾಡಿದ್ದೇ ಆದರೆ ನ್ಯಾಯಕೆ ಪಂಚಾಯತ್ ಚಾಪ್ಟರ್ 11 ರಿಂದ 15ರ ತನಕ ಬಿಟ್ಟುಬಿಡಿ. ಇದರಿಂದ ನಿಮಗೆ ಕೀರ್ತಿ

11–00 A. M.

ಬರುವುದಿಲ್ಲ. ಇದು ನಾನು ಸ್ಪಷ್ಟವಾಗಿ ಹೇಳತಕ್ಕಂಥ ಅಭಿಪ್ರಾಯ. ನಾನು ಅಮೆರಿಕಾಕ್ಕೆ ಹೋಗಿದ್ದೆ. ಅಲ್ಲಿ ಕೆಳಗಿನ ಕೋರ್ಟುಗಳು ಏನಿವೆ ಅಲ್ಲಿ ಎಲೆಕ್ಟೆಡ್ ಜಡ್ಜಸ್ ಯಾವ ರೀತಿಯಲ್ಲಿ ಸ್ಮಾಲ್ ಕಾಸ್ ಕೇಸಸ್‌ಗಳನ್ನು ನ್ಯಾಯ ವಿಚಾರಣೆ ಮಾಡುತ್ತಾರೆ ಅನ್ನುವುದನ್ನು ನಾನು ಅಲ್ಲಿ ಟೆಲಿವಿಷನ್‌ನಲ್ಲಿ ನೋಡಿದ್ದೇನೆ, ಅಲ್ಲಿ ಕೋರ್ಟಿಗೆ ಹೋಗಿ ನೋಡಿದ್ದೇನೆ, ಅಲ್ಲಿರುವ ಕಾರ್ಯಕಲಾಪಗಳನ್ನು ನೋಡಲು ಹೋಗಿ ಕುಳಿತಿದ್ದೇನೆ. ಅಲ್ಲಿ ವಿದ್ಯಾವಂತರ ಸಂಖ್ಯೆ ಜಾಸ್ತಿ ಇದೆ. ಅಲ್ಲಿ ಯಾವ ತರಹವಾದ ಗೊಂದಲವೂ ಇಲ್ಲ. ಅಲ್ಲಿ ರೂಲ್ ಆಫ್ ಲಾಗೆ ರೆಸ್ಪೆಕ್ಟ್ ಇದೆ. ಇಲ್ಲಿ ನಮ್ಮ ರಾಷ್ಟ್ರಮಟ್ಟದ ಅಕ್ಷರತೆಯನ್ನೇ ತೆಗೆದುಕೊಂಡರೆ ಇಲ್ಲಿ 36. 17 ಇದೆ. ಪುರುಷರ ಅಕ್ಷರತೆ ತೆಗೆದುಕೊಂಡರೆ 44.07 ಇದೆ. ಮಹಿಳೆಯರ ಅಕ್ಷರತೆ ತೆಗೆದುಕೊಂಡರೆ 20.7 ಇದೆ. ಅಂದರೆ ಮೂರನೇ ಒಂದು ಭಾಗದ ಜನರಿಗೆ ಅಕ್ಷರತೆ ಇದೆ. ಉಳಿದ ಮೂರನೇ ಎರಡು ಭಾಗದಷ್ಟು ಜನರು ಅವಿದ್ಯಾವಂತರಾಗಿದ್ದಾರೆ ಅನ್ನುವುದು ತಿಳಿಯುತ್ತದೆ. ನಮ್ಮ ರಾಜ್ಯದ್ದು ಆಮೇಲೆ ಹೇಳುತ್ತೇನೆ. ಬೇರೆ ರಾಜ್ಯದ್ದು ಹೋಲಿಕೆ ಮಾಡಿ ನೋಡಿದಾಗ ನಮ್ಮ ರಾಜ್ಯದಲ್ಲಿ ಎಷ್ಟು ಪರ್ಸೆಂಟ್

ಅಕ್ಷರತೆಯು ಇದೆ ಅನ್ನುವುದು ಗೊತ್ತಾಗುತ್ತದೆ. ಈ ಬಗ್ಗೆ ನಮ್ಮ ದಕ್ಷಿಣ ಇಂಡಿಯಾದ ಒಂದು ಅಂಕಿ ಸಂಖ್ಯೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಂಡಮಾನ್ ನಿಕೋಬಾರ ದ್ವೀಪದಲ್ಲಿ ಅಕ್ಷರತೆಯು ಸಂಖ್ಯೆ 47.37 ಇದೆ ಪಾಂಡಿಚೇರಿಯಲ್ಲಿ ಅಕ್ಷರತೆಯು ಸಂಖ್ಯೆ 54.25 ಇವೆ. ಅದೇ ಲಕ್ಷದ್ವೀಪದಲ್ಲಿ 54.72 ಇದೆ ಅದೇ ನಮ್ಮ ಪಕ್ಕದ ರಾಜ್ಯವಾದ ಕೇರಳದಲ್ಲಿ 69.17 ಇದೆ. ಹತ್ತಿರ ಹತ್ತಿರ 70 ಪರ್ಸೆಂಟ್ ಆಯಿತು. ಅದೇ ಬಾರ್ಡರ್ ಪ್ರದೇಶವಾದ ತಮಿಳ್‌ನಾಡ್ ತೆಗೆದುಕೊಂಡರೆ ಅಕ್ಷರತೆಯು ಸಂಖ್ಯೆ 45.75 ಇವೆ. ನಮ್ಮ ಕರ್ನಾಟಕದ ಅಕ್ಷರತೆಯು ಸಂಖ್ಯೆ ತೆಗೆದುಕೊಂಡರೆ 38.41 ಇದೆ ಎಂದರೆ ಬಹುಶಃ ಇಲ್ಲಿ ಅಷ್ಟು ಬುದ್ಧಿವಂತರಿಲ್ಲ ಎನ್ನುವುದು ಈ ಒಂದು ಅಂಕೆ ಸಂಖ್ಯೆಯಿಂದಲೇ ಗೊತ್ತಾಗುತ್ತದೆ. ಮತ್ತು ನಮ್ಮ ಕರ್ನಾಟಕದಲ್ಲಿರತಕ್ಕಂಥ ಜಾತೀಯತೆ ಸಂಖ್ಯೆ ತೆಗೆದುಕೊಂಡರೆ ಇಲ್ಲಿ ಇರುವಷ್ಟು ಜಾತಿಗಳು ಯಾವ ರಾಜ್ಯದಲ್ಲೂ ಇಲ್ಲ. ನಾನೂ ಈ ವಿಚಾರವನ್ನು ನನ್ನ ವೈಯಕ್ತಿಕವಾಗಿ ತಿಳಿಸುತ್ತಾ ಇಲ್ಲ. ಮಂಡಲ್ ಕಮಿಟಿ ರಿಪೋರ್ಟ್‌ನಲ್ಲಿ ಈ ಬಗ್ಗೆ ಏನು ಕೊಟ್ಟಿದೆ ಅದನ್ನು ನೋಡಿಕೊಂಡೇ ಹೇಳುತ್ತಾ ಇರುವುದು. ಅದನ್ನು ತಾವು ಓದಿ ನೋಡಿದರೆ ಗೊತ್ತಾಗುತ್ತದೆ. ಬಹಳ ಸ್ವಾರಸ್ಯವಾಗಿದೆ ಅದರಲ್ಲಿ ಬಹಳ ಚೆನ್ನಾಗಿ ವಿಂಗಡಿಸಿ ಹೇಳಿದ್ದಾರೆ. ತಾವು ಇದನ್ನು ಓದಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾನಂತೂ ಈ ರಿಪೋರ್ಟಿನ ಪ್ರತಿಯೊಂದು ಪೇಜನ್ನೂ ಕೂಡ ಓದಿದ್ದೇನೆ. ಯಾವ್ಯಾವ ರಾಜ್ಯದಲ್ಲಿ ಎಷ್ಟೆಷ್ಟು ಜಾತಿಗಳು ಇವೆ ಕರ್ನಾಟಕ ದಲ್ಲಿ ಎಷ್ಟು ಜಾತಿಗಳು ಇವೆ ಎನ್ನುವುದನ್ನು ಚೆನ್ನಾಗಿ ಕೊಟ್ಟಿದ್ದಾರೆ. ಅದರಲ್ಲಿ ದಕ್ಷಿಣ ರಾಜ್ಯಗಳದ್ದು ಮಾತ್ರ ನಾನು ಈಗ ಇಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಅವರ ರಿಪೋರ್ಟ ಪ್ರಕಾರ ತಮಿಳುನಾಡಿನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿದಹಾಗೆ 288 ಜಾತಿಗಳು ಇವೆ, ಗೋವಾದಲ್ಲಿ 15 ಜಾತಿಗಳು ಇವೆ, ಅಂಡಮಾನ್ ದ್ವೀಪದಲ್ಲಿ 17 ಜಾತಿಗಳು ಇವೆ, ಮತ್ತು ಕೇರಳದಲ್ಲಿ 208 ಜಾತಿಗಳು ಇವೆ. ನಮ್ಮ ಕರ್ನಾಟಕ ರಾಜ್ಯದ್ದು ತೆಗೆದು ಕೊಂಡರೆ ಇಲ್ಲಿ 333 ಜಾತಿಗಳು ಇವೆ. ಇಡೀ ಇಂಡಿಯಾದೇಶದ್ದು ತೆಗೆದುಕೊಂಡರೆ, ಇಲ್ಲಿರುವಷ್ಟು ಜಾತಿಗಳು ಯಾವರಾಜ್ಯದಲ್ಲೂ ಇಲ್ಲ. ತಾವು ಮಂಡಲ್ ಕಮೀಷನ್ ರಿಪೋರ್ಟ್ ತರಿಸಿಕೊಂಡು ಅದರಲ್ಲಿ ಅದರಲ್ಲಿ ಇದರ ಬಗ್ಗೆ ಏನು ಕೊಟ್ಟಿದ್ದಾರೆ ಎಂದು ನೋಡಿದರೆ ಗೊತ್ತಾಗುತ್ತದೆ. ಇದು ಪೇಜ್ ನಂಬರ್ 235 ರಲ್ಲಿ ಇದೆ ತಾವು ನೋಡಬಹುದು.

ಶ್ರೀ ಕೆ. ಬಿ. ಮಲ್ಲಪ್ಪ.--ಹಾಗಾದರೆ ಹಾವನೂರ್ ಕಮಿಟಿ ರಿಪೋರ್ಟ್‌ನಲ್ಲಿ ಕರ್ನಾಟಕಕ್ಕೆ ಎಷ್ಟು ಜಾತಿ ಇವೆ ಅಂತ ಏನು ಮಾಡಿದ್ದಾರೆ ಅದು ಸರಿಯಲ್ಲ ಎಂದು ಹೇಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನಾನು ಈ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಇಲ್ಲ. ಮಂಡಲ್ ಕಮೀಷನ್ ರಿಪೋರ್ಟಿನ ಪೇಜ್ ನಂಬರ್ 235 ರಲ್ಲಿ ಏನು ಕೊಟ್ಟಿದೆ ಅದರ ಪ್ರಕಾರ ಹೇಳಿದ್ದೇನೆ

ಶ್ರೀ ಎಸ್. ಆರ್. ಬೊಮ್ಮಾಯಿ.—ಮಂಡಲ್ ಕಮೀಷನ್ ರಿಪೋರ್ಟ್ ನೋಡಿದ್ದೇನೆ.

ಶ್ರೀ ವೈ. ರಾಮಕೃಷ್ಣ.--ಮಾನ್ಯ ಮಂತ್ರಿಗಳೇ ಹೇಳಿದ್ದಾರಲ್ಲಾ ಇನ್ನೇನು ಬೇಕು ಬಹಳ ಸ್ವಾರಸ್ಯವಾಗಿದೆ ತಮಗೆ ಹೇಳಬೇಕಾದರೆ ಈ ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲೇ ಮೊಟ್ಟಮೊದಲು 2 ಜಾತಿ ಇತ್ತು ಅನಂತರ 5 ಆಯಿತು, ಅನಂತರ 7 ಆಯಿತು, ಈಗ 101 ಆಗಿವೆ,

ಶ್ರೀ ಕೆ ಬಿ. ಮಲ್ಲಪ್ಪ.--ಹಾಗಾದರೆ ಜಾತಿಯನ್ನು ಡಿವೈಡ್ ಮಾಡಿರುವುದು ಒಳ್ಳೆಯದಲ್ಲ ಎಂದು ಹೇಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.--ನಾನು ಈ ರಿಪೋರ್ಟ್ ಅನ್ನು ಕಂಡಮ್ ಮಾಡುತ್ತಾ ಇಲ್ಲ. ಈ ರಿಪೋರ್ಟ್‌ನಲ್ಲಿ ಏನು ಬರೆದಿದ್ದಾರೆ ಅದನ್ನು ನಾನು ಹೇಳುತ್ತಾ ಇದ್ದೇನೆ. ಅದರ ಮೇಲೆ ಏನು ಆಕ್ಷನ್ ತೆಗೆದು ಕೊಳ್ಳಬೇಕು ಅನ್ನುವುದು ನಿಮಗೆ ಬಿಟ್ಟಿದ್ದು. ತಮಗೆ ಹೇಳಬೇಕಾದರೆ ಈ ಪರಿಶಿಷ್ಟ ಜನಾಂಗದಲ್ಲಿ ಮೊದಲು 2 ಜಾತಿ ಇತ್ತು, ಆಮೇಲೆ ಇದರ ಬಗ್ಗೆ ರೆಪ್ರೆಸೆಂಟೇಷನ್ ಬಂದು ಬಂದು ನಮ್ಮನ್ನು ಸೇರಿಸಿ, ನಮ್ಮನ್ನು ಸೇರಿಸಿ ಎಂದು ರೆಪ್ರೆಸೆಂಟೇಷನ್ ಬಂದು ಕೊನೆಗೆ ಈಗ 100ಕ್ಕೆ ಬಂದಿದೆ. ನಾನು ಮಂತ್ರಿಯಾಗಿದ್ದಾಗಲೂ ಸಹ ಇದರ ಬಗ್ಗೆ ದಿನಾವೂ ರೆಪ್ರೆಸೆಂಟೇಷನ್ ಬರುತ್ತಿತ್ತು. ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ / ಈ ರೀತಿಯಾಗಿ ಜಾಸ್ತಿಯಾಗುವುದಕ್ಕೆ ಕಾರಣ ಏನು ಎಂದರೆ ಅನೇಕ ಬ್ಯಾಕ್‌ವರ್ಡ್ ಕ್ಲಾಸ್‌ನವರು ನಾವು ಹರಿಜನರಾಗಬೇಕು, ನಮ್ಮನ್ನು ಹರಿಜನರ ಲಿಸ್ಟ್‌ಗೆ ಸೇರಿಸಿ, ನಮ್ಮನ್ನು ಹರಿಜನರ ಲಿಸ್ಟ್‌ಗೆ ಸೇರಿಸಿ ಎಂದು ಬಂದಿದ್ದರಿಂದ ಈವೊತ್ತು ಆ ಸಂಖ್ಯೆ ಜಾಸ್ತಿ ಬೆಳೆದಿದೆ. ಆರೀತಿ ಸೇರಿಸುವುದು ಬಿಡುವುದು ಸರ್ಕಾರಕ್ಕೆ ಸಂಬಂಧಪಟ್ಟದ್ದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ರಾಷ್ಟ್ರಪತಿಗೆ ಸಂಬಂಧಪಟ್ಟದ್ದು. ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೊಂದು ಕಡೆ ಏನಾಗಿದೆ ಎಂದರೆ ಯಾರನ್ನು ಫಾರವರ್ಡ್ ಜನರು ಅಂತ ಹಾವನೂರ್ ಕಮೀಷನ್‌ನವರು ಏನು ಮಾಡಿದ್ದಾರೋ ಅವರು ನಮ್ಮ ಹತ್ತಿರ ಬಂದು ನಾವು ಹಿಂದುಳಿದವರು, ನಮ್ಮನ್ನು ಹಿಂದುಳಿದ ವರ್ಗಕ್ಕೆ

ಸೇರಿಸಿ ಎಂದು ರೆಪ್ರೆಸೆಂಟೇಷನ್ ಕೊಡುತ್ತಾರೆ. ನಮ್ಮ ರಾಜ್ಯದಲ್ಲಿ ಈ ರೀತಿಯಾಗಿ ಮುಂದುವರೆದ ಜನಾಂಗದವರು ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಎನ್ನುತ್ತಾರೆ, ಹಿಂದುಳಿದ ವರ್ಗದವರು ನಮ್ಮನ್ನು ಹರಿಜನರ ಲಿಸ್ಟ್‌ಗೆ ಸೇರಿಸಿ ಎಂದು ಹೇಳುತ್ತಾರೆ. ಈವಾಗ ಈ ತರಹ ಒಂದು ಮೂವ್‌ಮೆಂಟ್ ಪ್ರಾರಂಭವಾಗಿದೆ.

ಶ್ರೀ ಆರ್ ಸಿ. ಬಾಳೆಕುಂಡರ್ಗಿ.--ಅವರು ಹೇಳಿರುವುದು ರೆಪ್ರೆಸೆಂಟೇಷನ್ ಕೊಡುವುದು ಜಾತಿ ಆಧಾರದ ಮೇಲೆ ಅಲ್ಲದೆ ಆರ್ಥಿಕ ಆಧಾರದ ಮೇಲೆ ನಮ್ಮನ್ನು ಈ ರೀತಿಯಾಗಿ ಪರಿಗಣಿಸಬೇಕು ಎಂದು ಕೇಳಿದ್ದಾರೆ.

ಶ್ರೀ ವೈ ರಾಮಕೃಷ್ಣ.--ಇದು ತಪ್ಪು, ಸರಿ ಎಂದು ನಾನು ಹೇಳುವುದಿಲ್ಲ, ಇದರಿಂದ ಈ ರೀತಿಯಾಗಿ ಸಂಖ್ಯೆ ಜಾಸ್ತಿಯಾಗಿದೆ ಅಷ್ಟೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಈ ರೀತಿಯಾಗಿ ಮೂರನೇ ಒಂದು ಭಾಗ ಅಕ್ಷರತೆ ಇರತಕ್ಕಂಥಾ ದೇಶದಲ್ಲಿ ಯಾವರೀತಿಯಾಗಿ ನ್ಯಾಯ ಪಂಚಾಯತಿ ಮಾಡುವುದಕ್ಕೆ ಬರುತ್ತದೆ ಅನ್ನುವುದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಅಬ್ದುಲ್‌ನಜೀರ್‌ಸಾಬ್.—ಮಾನ್ಯ ಸದಸ್ಯರು ಬಹಳ ಸ್ವಾರಸ್ಯವಾಗಿ ಮಾತನಾಡಿದ್ದಾರೆ. ಬಹಳ ಜಾತಿಗಳು ಇನ್ನೆ ಯಾವ ರಾಜ್ಯದಲ್ಲೇ ಆಗಲಿ ಜಾತಿಗಳು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಇರುವಷ್ಟು ಜಾತಿಗಳು ಇಲ್ಲ ಅಂತ ಹೇಳಿದ್ದೀರಿ. ಈ ಒಂದು ಹಿನ್ನೆಲೆಯಲ್ಲಿ ನಾನು ಹೇಳಬೇಕಾದರೆ ಸನ್ಮಾನ್ಯ ದಿವಂಗತ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಈ ಹಿಂದುಳಿದ ಜನಾಂಗಕ್ಕೆ ಪರಿಶಿಷ್ಟ ಜನಾಂಗಕ್ಕೆ 68 ರಷ್ಟು ರಿಸರ್ವೇಷನ್ ತಂದರು, ಆವಾಗ ನಮ್ಮ ರಾಜ್ಯದಲ್ಲಿ ಯಾವ ಒಂದು ರಕ್ತಪಾತವೂ ಆಗಲಿಲ್ಲ. ಆದೇ ಬಿಹಾರ ರಾಜ್ಯದಲ್ಲಿ 28 ರಷ್ಟು ರಿಸರ್ವೇಷನ್ ತಂದಿದ್ದಕ್ಕೆ ಆ ರಾಜ್ಯದಲ್ಲಿ ರಕ್ತಪಾತವಾಯಿತು. ಇದನ್ನು ಮಾನ್ಯ ಸದಸ್ಯರು ಮರೆಯಬಾರದು. ನಮ್ಮ ರಾಜ್ಯದಲ್ಲಿ ಈ ಬಗ್ಗೆ ಯಾವ ಒಂದು ರಕ್ತಪಾತವೂ ಆಗಲಿಲ್ಲ. ಅಲ್ಲದೆ ನಮ್ಮ ರಾಜ್ಯದ ಒಂದು ಐತಿಹಾಸಿಕ ಹಿನ್ನೆಲೆ ಹೇಳಬೇಕಾದರೆ ಸುಮಾರು 800 ವರ್ಷದ ಹಿಂದೆ ಜಗಜ್ಯೋತಿ ಬಸವಣ್ಣನವರು ಈ ಜಾತಿಯನ್ನು ನಿರ್ಮೂಲನಾ ಮಾಡುವುದಕ್ಕೋಸ್ಕರ ಒಂದು ಹೋರಾಟ ಪ್ರಾರಂಭ ಮಾಡಿದರು, ಈ ತರಹ ಒಂದು ಐತಿಹಾಸಿಕ ಹಿನ್ನೆಲೆ ನಮ್ಮ ರಾಜ್ಯದಲ್ಲಿ ಇದೆ ಅನ್ನುವುದನ್ನು ತಿಳಿದುಕೊಳ್ಳಬೇಕು.

ಶ್ರೀ ವೈ. ರಾಮಕೃಷ್ಣ.--ಆ ಸ್ಥಾನದಲ್ಲಿ ನಾನು ಮಂತ್ರಿಯಾಗಿದ್ದಾಗ 2-3 ಜನರು ನನ್ನ ಹತ್ತಿರ ಬಂದು ನನಗೆ ಅರ್ಜಿ ಕೊಟ್ಟಿದ್ದಾರೆ. ಏನೆಂದರೆ ಅಲ್ಲಿ ಬಸವೇಶ್ವರರ ನಾಟಕ ಆಡುತ್ತಿದ್ದಾಗ ಅವರನ್ನು ಹಿಡಿದುಕೊಂಡು ಹೊಡೆದಿದ್ದಾರೆ ಎಂದು. ನಾನೂ ಸಹ ಅದರ ಬಗ್ಗೆ ಡೀಲ್ ಮಾಡಿದ್ದೇನೆ. ಆವಾಗ ಏನೋ ಬಸವೇಶ್ವರರು ಇದಕ್ಕೆ ಕ್ರಾಂತಿ ಮಾಡಿದರು ಆದರೆ ಈಗ ಬಸವೇಶ್ವರರ ನಾಟಕವನ್ನು ಆಡುವುದಕ್ಕೆ ಹೋದರೆ ಅವರನ್ನು ಹಿಡಿದುಕೊಂಡು ಹೊಡೆದಿದ್ದಾರಲ್ಲಾ ಇದಕ್ಕೇನು ಹೇಳುತ್ತೀರಾ ? ಈ ಬಿಲ್ ನೋಡಿದರೆ ಬರೀ ಗಗನ ಕುಸುಮ ಇದ್ದ ಹಾಗೆ ಇದೆ. ಯಾವುದಾದರೂ ಫಂಗ್‌ಷನ್ ಮಾಡಬೇಕಾದರೆ ಮಂತ್ರಿಗಳೂ ಬೇಕಾಗಿಲ್ಲ, ಮುಖ್ಯಮಂತ್ರಿಗಳೂ ಬೇಕಾಗಿಲ್ಲ. ಎಲ್ಲಾ ಪವರ್ಸ್ ಅನ್ನೂ ಅಲ್ಲಿಯ ಗ್ರಾಮ ಪಂಚಾಯಿತಿಯವರಿಗೆ ಒಪ್ಪಿಸಿದ್ದೀರಿ. ಎಕ್ಸಿಕ್ಯೂಟೀವ್ ಪವರ್ಸ್ ಅನ್ನು ಮತ್ತು ಜುಡಿಸಿಯಲ್ ಪವರ್ಸ್ ಅನ್ನು ಹಾಗೂ ಲೆಜಿಸ್ಲೇಚರ್ ಪವರ್ಸ್ ಅನ್ನು ಇವರ ಕೈಯಲ್ಲೇ ಕೊಟ್ಟರೆ ಅವರು ಹೇಗೆ ಕೆಲಸ ನಿರ್ವಹಿಸುತ್ತಾರೆ ಅನ್ನುವುದನ್ನು ನೋಡಬೇಕು. ಈ ಬಗ್ಗೆ ಅವರು ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯ ಇರುವಂತೆ ಒಂದು ವಾತಾವರಣ ನಿರ್ಮಾಣ ಮಾಡಿದ್ದರೆ ಆ ಪ್ರಶ್ನೆ ಬೇರೆ. ಈಗ ಅವರಿಗೆ ಈ ಸಾಮರ್ಥ್ಯ ಇದೆಯೋ ಇಲ್ಲವೋ ಎನ್ನುವುದನ್ನು ತಾವು ನೋಡಬೇಕು. ಈಗ ನಾವು ಯಾವ ಸಮಾಜದಲ್ಲಿದ್ದೇವೆ ? ಅವರು ನಾವು ಹಿಂದುಳಿದ ಸಮಾಜದಲ್ಲಿದ್ದೇವೆ, ಇನ್ನೂ ಮುಂದುವರೆದ ಸಮಾಜಕ್ಕೆ ಬಂದಿಲ್ಲ. ನಾವು ಮುಂದುವರೆದ ಸಮಾಜಕ್ಕೆ ಬಂದಾಗ ನಿಮ್ಮ ಐಡಿಯಲ್ ಏನು ಇದೆ ಆವಾಗ ಬೇಕಾದರೆ ಖಂಡಿತವಾಗಿಯೂ ತೆಗೆದುಕೊಂಡು ಬನ್ನಿ. ಆವಾಗ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಸ್ವಾಮಿ, ಮತ್ತೊಂದು ವಿಚಾರ. ನಾಮಿನೇಷನ್ ಬಗ್ಗೆ ಹೇಳುತ್ತೇನೆ ನಾನು ನ್ಯಾಯ ಪಂಚಾಯತ್ ಬಗ್ಗೆ ಕ್ಲಾಸ್‌ಬೈಕ್ಲಾಸ್ ಹೋಗುವುದಿಲ್ಲ. ಆ ರೀತಿ ಹೇಳುವುದಕ್ಕೆ ಹೋದರೆ ಒಂದು ದಿವಸ ಆಗುತ್ತದೆ ಭಾಷಣ ಮಾಡಬಹುದು. ನಾನು ಈಗ ಕೆಲವು ಚಾಪ್ಟರ್‌ಗಳ ಬಗ್ಗೆ ಮಾತ್ರ ಹೇಳುತ್ತೇನೆ. ಮಂತ್ರಿಗಳಿಗೆ ಏನಾದರು ಮುಂದಿನ ಪ್ರಜ್ಞೆ ಇದೆಯೇ ? ಈ ಸಮಾಜದ ಹಿನ್ನೆಲೆಯಲ್ಲಿ ಇದನ್ನು ಏನಾದರು ಅನುಷ್ಠಾನಕ್ಕೆ ತಂದರೆ ನಾಳೆ ಸಮಾಜದಲ್ಲಿ ಏನಾಗಬಹುದು ಎಂಬ ಪ್ರಜ್ಞೆ ಅರಿವು ಇರುವುದಾದರೆ, ದಯವಿಟ್ಟು ಈ ನ್ಯಾಯ ಪಂಚಾಯತ್ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಿ. ಒಂದು ವೇಳೆ ಮುಂದೆ ಆಗಬಹುದಾದನ್ನು ಎದುರಿಸುವುದಕ್ಕೆ ತಾವು ತಯಾರಾಗಿದ್ದರೆ ತೆಗೆದುಕೊಂಡು ಬನ್ನಿ. ಇದು ನ್ಯಾಯ ಪಂಚಾಯತ್ ಅಲ್ಲ ಅನ್ಯಾಯ ಪಂಚಾಯತ್ ಆಗುತ್ತದೆ. ತಾವು ಹೇಳಿರತಕ್ಕದು ಬರೀ ಡಿಸ್‌ಕ್ವಾಲಿಫಿಕೇಶನ್, ಕ್ವಾಲಿಫಿಕೇಶನ್ ಎಲ್ಲಿದೆ ಸ್ವಾಮಿ ? ಕ್ವಾಲಿಫಿಕೇಷನ್ ಎಂದರೆ ಓದುಬರಹ ಬರಬೇಕು, ಮೂರನೇ ಕ್ಲಾಸ್ ಓದಿದ್ದರೂ ಓದು

ಬರಹ ಬರುತ್ತದೆಂದು ಆಗುತ್ತದೆ. ಸೈನ್ ಮಾಡುವುದಕ್ಕೆ ಬಂದರೂ ಓದುಬರಹ ಬರುತ್ತದೆ. ಆದರೆ ನ್ಯಾಯ ವಿತರಣೆ ಮಾಡುವುದಕ್ಕೆ ಇಷ್ಟು ಸಾಲುವುದಿಲ್ಲ. ಲೀಗಲ್ ಜಸ್ಟೀಸ್ ಬೇರೆ ಸೋಶಿಯಲ್ ಜಸ್ಟೀಸ್ ಬೇರೆ. ಎರಡಕ್ಕೂ ಬಹಳ ವ್ಯತ್ಯಾಸ ಇದೆ. Legal justice will not be a Social Justic, but Social Justice will be Legal justice. ಲೀಗಲ್ ಜಸ್ಟೀಸ್. ಇದನ್ನು ಅರ್ಥ ಮಾಡಿಕೊಳ್ಳುವವರು ಎಷ್ಟು ಜನ ಇದ್ದಾರೆ. ಲೀಗಲ್ ಜಸ್ಟೀಸ್ ಎಲ್ಲಿದೆ ಸ್ವಾಮಿ ಇವತ್ತು 20 ಮನೆ ಕಟ್ಟಿಕೊಂಡಿರುತ್ತಾರೆ, 21ನೇ ಮನೆಗೆ ಅರ್ಜಿ ಹಾಕಿಕೊಂಡಿರುತ್ತಾರೆ Nothing prevents in law for not issuing licence. ಆದರೆ ಯಾವ್ಹೋನಾದರೂ ಒಬ್ಬ ಬಡವ, ತನ್ನ ವಾಸಕ್ಕೆ, ತನ್ನ ಹೆಂಡತಿ ಮಕ್ಕಳ ವಾಸಕ್ಕೆ ಒಂದು ಮನೆ ಕಟ್ಟಿದೆ, ಹಣವಂತ ಕೋರ್ಟಿಗೆ ಹೋಗಿ ಇಂಜೆಂಕ್ಷನ್ ಆರ್ಡರ್ ತರುತ್ತಾನೆ. ಅದೇ 19 ಮನೆ ಕಟ್ಟಿಕೊಂಡು 20 ನೇ ಮನೆ ಕಟ್ಟುವವನಿಗೆ ಏನೂ ಇಲ್ಲವೇ ? ಒಂದೇ ಒಂದು ಮನೆ ಕಟ್ಟಿಕೊಳ್ಳುವುದಕ್ಕೆ ಬಂದಿದ್ದಾನೆ. ಅವನಿಗೆ ಸ್ಟೇ ಆರ್ಡರ್ ಕೊಡಬಾರದು ಎಂಬುದು ಕಾನೂನಿನಲ್ಲಿ ಇಲ್ಲ. ಇಂತಹ ಸಮಾಜದಲ್ಲಿ ನಾವು ಇದ್ದೇವೆ. ನಾನು ಇನ್ನೂ ಹಿಂದಕ್ಕೆ ಹೋಗಿ ಹೇಳಬೇಕಾದರೆ ಇದು ಹೊಸದೇನೂ ಅಲ್ಲ ಅಶೋಕನ ಕಾಲದಲ್ಲೇ ಇಂಥಾದ್ದು ಇತ್ತು. concept of law. ಅಶೋಕ ಎಲ್ಲಾ ಅಧಿಕಾರವನ್ನು ಜನಗಳ ಕೈಗೆ ಕೊಟ್ಟರೂ, ನ್ಯಾಯ ಪಂಚಾಯತ್ ಮಾತ್ರ ಕೊಡಲಿಲ್ಲ. ನ್ಯಾಯವನ್ನು ತಾನೇ ಕುಳಿತುಕೊಂಡು, ಗಂಟೆ ಹೊಡೆದು ಕೇಳುತ್ತಿದ್ದ. ಮೊಗಲರ ಕಾಲದಲ್ಲಿಯೂ ಸಹ ಇದೇ ಸ್ಥಿತಿ ಇತ್ತು. ಅಕ್ಬರ್ ಕಾಲಕ್ಕೆ ಬನ್ನಿ. ಹಿಸ್ಟರಿಯಲ್ಲಿ ತಾವು ಎಲ್ಲಾದರೂ ತೆಗೆದುಕೊಳ್ಳಿ, dispensation of justice. ಯಾರು ದೊರೆ ಇರುತ್ತಾರೆ, ಅವರೇ ಇಟ್ಟುಕೊಂಡಿದ್ದರೇ ಹೊರತು, ಪ್ರಜೆಗಳ ಕೈಗೆ ಅದನ್ನು ಕೊಟ್ಟಿರಲಿಲ್ಲ. ಆದುದರಿಂದ ದಯವಿಟ್ಟು ತಾವು ಇವುಗಳ ಕಡೆ ಹೆಚ್ಚು ಗಮನ ಹರಿಸದೆ, ನಿಜವಾಗಿಯೂ ಕೂಡ ತಮ್ಮ ಮನಸ್ಸಿನಲ್ಲಿ ಏನಿದೆ ಆ ರೀತಿ ಕೆಲಸ ಮಾಡಬೇಕೆಂದು ಇದ್ದರೆ, ನ್ಯಾಯ ಪಂಚಾಯತ್ ಚಾಪ್ಟರ್ ಕಿತ್ತು ಹಾಕಿ, ಉಳಿದ ಚಾಪ್ಟರ್‌ಗಳ ಬಗ್ಗೆ ಆಲೋಚನೆ ಮಾಡಬಹುದು. ಉಳಿದಿರತಕ್ಕ ಚಾಪ್ಟರ್‌ಗಳ ಬಗ್ಗೆ ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಇಷ್ಟಪಡುತ್ತೇನೆ ಮೊದಲು ಮಂಡಲ್ ಪಂಚಾಯತ್ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಉತ್ತಮವಾದ ಕೆಲಸ ಮಾಡಿದ್ದಾರೆ ಆದರೆ ಒಂದೆರಡು ಕಡೆ ಮಾತ್ರ ಎಡವಿದ ಹಾಗೆ ಕಾಣಿಸುತ್ತದೆ ಅದು ಎಲ್ಲಿ ಎಂದು ಹೇಳಿದರೆ ಕ್ಲಾಸ್ 5, ಸಬ್‌ಕ್ಲಾಸ್ 3 ಇದರಲ್ಲಿ ಏನು ಹೇಳುತ್ತದೆ ಎಂದರೆ

> 'The Committee are of the opinion that when no person belonging to backward class is elected, two persons belonging to the said class shall be nominated.''

''The sub-clause is modified accordingly.'' ಎಂದು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡಿದ್ದರೆ ಚೆನ್ನಾಗಿತ್ತು ಬ್ಯಾಕ್‌ವರ್ಡ್ ಕ್ಲಾಸಸ್ ಎಂದರೆ ತಮ್ಮ ಅಭಿಪ್ರಾಯದಲ್ಲಿ ಏನೆಂದು ತಿಳಿದುಕೊಂಡಿದ್ದೀರಿ, ಅವರಿಬ್ಬರು ಸೆಲೆಕ್ಟ್ ಆಗಲಿ, ಆಗದೇ ಹೋದರೆ ನಾವು ನಾಮಿನೇಟ್ ಮಾಡುತ್ತೇವೆ ಎಂದು ಹೇಳುತ್ತೀರಿ ಈವತ್ತು ವೋಟರುಗಳ ಮನೋಭಾವನೆ ಏನೆಂದು ತಮಗೆ ಗೊತ್ತಿದೆಯೆ ? ಎಲೆಕ್ಟ್ ಆಗದಿದ್ದರೆ ನಾಮಿನೇಟ್ ಮಾಡುತ್ತೇವೆಂದು, ತಾವು ಆಪ್ಷನ್ ಯಾವಾಗ ಕೊಟ್ಟರೋ ವೋಟ್ ಯಾರು ಕೊಡುತ್ತಾರೆ ? ತಾವು ಆಲೋಚನೆ ಮಾಡಿ. I call it a very bad jurisprudence. ಬ್ಯಾಕ್‌ವರ್ಡ್‌ಕ್ಲಾಸಸ್ ಏನಿದೆ ಅವುಗಳನ್ನು ಮುಂದುವರಿಸತಕ್ಕ ಜವಾಬ್ದಾರಿ, ಸರ್ಕಾರದ ಹೊಣೆಗಾರಿಕೆ ಇದೆ ಅದನ್ನು ಯಾವರೀತಿ ಅನುಷ್ಠಾನಕ್ಕೆ ತರಬೇಕು ಒಂದು ವೇಳೆ ಅವರಿಗೋಸ್ಕರ ಸ್ಥಾನಗಳನ್ನು ಮೀಸಲಿಟ್ಟು, ಆ ಸ್ಥಾನಕ್ಕೆ ಅವರು ಎಲೆಕ್ಟ್ ಆಗದಿದ್ದರೆ ಆ ಯೋಚನೆ ಬೇರೆ. ಸ್ಥಾನಗಳನ್ನೇ ಮೀಸಲಾಗಿಟ್ಟಿಲ್ಲ ಅವರೆಲ್ಲಿಂದ ಬರುವುದು, ಗವಾಕ್ಷಿಯಿಂದ ಬರುತ್ತಾರೆಯೇ ? ಅವರು ಎಲ್ಲಿ ಬರುತ್ತಾರೆ ಹೇಳಿ ? ಈಗ ಉದಾಹರಣೆಗೆ ರಿಸರ್ವ್ ಸೀಟ್ಸ್ ಹರಿಜನ ಗಿರಿಜನರಿಗೆ ರಿಸರ್ವ್ ಸೀಟ್ಸ್ ಇದೆ ಅದರ ಮೂಲಕ ಅವರು ನಮ್ಮ ಅಸೆಂಬ್ಲಿಗೆ ಗೆದ್ದು ಬರುತ್ತಾರೆ. ಈಗ ಅವರು ಜನರಲ್ ಸೀಟ್ಸ್‌ನಿಂದ ಕಂಟೆಸ್ಟ್ ಮಾಡಿ ಬರಬಹುದು. ಅದಕ್ಕೂ ಪ್ರಾವಿಷನ್ ಇದೆ. ವಾಸ್ತವಾಂಶ ಈವತ್ತು ಏನಾಗಿದೆ ? 1983 ರಲ್ಲಿ, ಮೊನ್ನೆ ಎಲೆಕ್ಷನ್‌ನಲ್ಲಿ ಜನರಲ್ ಸೀಟ್ಸ್‌ಗೆ 98 ಜನ ಎಸ್. ಸಿ. ಗಳು, 6 ಜನ ಎಸ್. ಟಿ. ಗಳು ಒಟ್ಟು 104 ಜನ ಕಂಟೆಸ್ಟ್ ಮಾಡಿದರು. ಆ 104 ಜನರ ಪೈಕಿ ಇಬ್ಬರು ಮಾತ್ರ, ಡಿಪಾಸಿಟ್ ತೆಗೆದು ಕೊಂಡಿದ್ದಾರೆ, ಒಬ್ಬರು ಶ್ರೀ ಐ. ಪಿ. ಡಿ. ಸಾಲಪ್ಪನವರು, ಇಲ್ಲಿ ಎಂ. ಎಲ್. ಎ. ಆಗಿದರು. ಇನ್ನೊಬ್ಬರು ಶ್ರೀ ಬಿ. ಎಂ. ತಿಪ್ಪೆಸ್ವಾಮಿ ಈಗ ಪಬ್ಲಿಕ್ ಸರ್ವೀಸ್ ಕಮಿಷನ್ ಮೆಂಬರ್ ಇದ್ದಾರೆ. ಇಬ್ಬರಿಗೆ ಮಾತ್ರ, ಡಿಪಾಸಿಟ್ ಬಂದಿತು ಇನ್ನು 102 ಜನಕ್ಕೆ ಡಿಪಾಸಿಟ್ ಹೋಯಿತು. ಇವತ್ತು ಪಿಡಿ

ಯುಲ್ ಆಗಿ ನಾವು ಏನು ಬೇಕಾದರೂ ಹೇಳಬಹುದು ಇನ್ನೊಂದು ಮುಖ್ಯವಾದ ವಿಚಾರ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ ನಮ್ಮ ರಾಷ್ಟ್ರನಾಯಕರು ಡಾ|| ಅಂಬೇಡ್ಕರ್ ಅವರು, ಅವರ ಪ್ರತಿಮೆಯನ್ನು ನಾವು ಇವತ್ತು ವಿಧಾನಸೌಧದ ಮುಂದೆ ಹಾಕಿದ್ದೇವೆ. ಅವರು ಸಂವಿಧಾನದ ಶಿಲ್ಪಿ ಅಂತಹವರು ಕ್ಯಾಂಡಿಡೇಟ್ ಆಗಿ ನಿಂತರೆ ಅರಿಸಿ ಬರುವುದು ಭಾರೀ ಸುಲಭ ಎಂದು ಹೇಳಬಹುದು ಅವರು ಬೊಂಬಾಯಿನಲ್ಲಿ ಎಲೆಕ್ಷನ್‌ಗೆ ನಿಂತುಕೊಂಡರು, ಅವರು ಸೋತುಹೋಗಿಬಿಟ್ಟರು. ಕಾರಣ ಏನು ? ಅವರು ಬುದ್ಧಿವಂತರಲ್ಲ ಮೇಧಾವಿಗಳಲ್ಲ ಎಂದು ಅರ್ಥವೇ. ರಾಜ್ಯಾಂಗ ಬರೆದಿರತಕ್ಕಂಥ ವ್ಯಕ್ತಿ ಎಲೆಕ್ಷನ್‌ಗೆ ನಿಂತುಕೊಂಡರೆ ಸೋಲುವುದಕ್ಕೆ ಕಾರಣ ಏನು ಎಂಬುದನ್ನು ತಾವು ಆಲೋಚನೆ ಮಾಡಬೇಕು. ಇನ್ನು ಆಂಧ್ರ ಪ್ರದೇಶಕ್ಕೆ ಬನ್ನಿ ಆಂಧ್ರ ಪ್ರದೇಶದ ಅಸೆಂಬ್ಲಿ ಎದುರುಗಡೆ ದಿವಂಗತ ಸಂಜೀವಯ್ಯನವರ ಪ್ರತಿಮೆಯನ್ನು ನಿಲ್ಲಿಸಿದ್ದಾರೆ. ಅವರು ಪ್ರಪ್ರಥಮ ಹರಿಜನ ಮುಖ್ಯಮಂತ್ರಿಗಳಾಗಿದ್ದವರು. ಅವರು ಬಹಳ ಚೆನ್ನಾಗಿ ಕೆಲಸ ಮಾಡಿದರು ಎಂದು ಸದನದಲ್ಲಿ ಅವರ ಫೋಟೋ ಹಾಕಿದ್ದಾರೆ. ಪಾರ್ಲಿಮೆಂಟಿಗೆ ಜನರಲ್ ಸೀಟಿನಿಂದ ಕಂಟೆಸ್ಟ್ ಮಾಡಿದರು. ಏನಾಯಿತು, ಅವರು ಗೆದ್ದು ಹೋದರೇ ? ಇಲ್ಲ ಅವರು ಸೋತರು. ಇವತ್ತು ಸಮಾಜ ತಾವು ತಿಳಿದುಕೊಂಡ ರೀತಿಯಲ್ಲಿ ಇಲ್ಲ. ಹಿಂದುಳಿದಿರುವವರು ಇನ್ನೂ ಹಿಂದುಳಿಯುವುದಕ್ಕೆ ಅವರು ಯೋಚನೆ ಮಾಡುತ್ತಿದ್ದಾರೆ. ಕಾಕಾ ಕಾಲೇಲ್ಕರ್ ರಿಪೋರ್ಟ್‌ನಲ್ಲಿ ಮಹಿಳೆಯರನ್ನು ಹಿಂದುಳಿದವರು ಎಂದು ಪರಿಗಣಿಸಿದರು. ಭಾರತದ ಜನಗಣತಿ ಪ್ರಕಾರ ನಮ್ಮ ದೇಶದಲ್ಲಿ ಮಹಿಳೆಯರ ಜನಸಂಖ್ಯೆ 51 ಪರ್ಸೆಂಟ್ ಇದೆ ಅವರು ಜನರಲ್ ಸೀಟಿನಿಂದ ಕಂಟೆಸ್ಟ್ ಮಾಡಬಹುದಲ್ಲವೇ ? ಅಸೆಂಬ್ಲಿಗೆ ಕಂಟೆಸ್ಟ್ ಮಾಡಿದರು ಎಲ್ಲಾ ಪಕ್ಷಗಳಿಂದಲೂ ಮಾಡಿದರು. ಒಟ್ಟು 38 ಮಹಿಳೆಯರು ಜನತಾದಿಂದ 5, ಕಾಂಗ್ರೆಸ್‌ನಿಂದ 8, ಲೋಕದಳ 1, ಬಿ ಜೆ ಪಿ 1 ಮತ್ತು ಇಂಡಿಪೆಂಡೆಂಟ್ಸ್ 23, ಒಟ್ಟು 38 ಜನ ಮಹಿಳೆಯರು ಕಂಟೆಸ್ಟ್ ಮಾಡಿದರು ಗೆದ್ದವರು ಇಬ್ಬರೇ ಇಬ್ಬರು ಒಬ್ಬರು ಜನತಾ ಪಕ್ಷದ ಕಡೆ ಕುಳಿತಿರತಕ್ಕಂಥ ಮಂತ್ರಿಗಳು, ಇತ್ತ ಕಡೆ ಅಂದರೆ ನಮ್ಮ ಕಡೆ ಕುಳಿತಿರತಕ್ಕ ಶ್ರೀಮತಿ ನಾಗರತ್ನಮ್ಮನವರು. ಬಹಳ ಸಂತೋಷ ಅವರನ್ನು ಕ್ಯಾಬಿನೆಟ್ ದರ್ಜೆ ಮಂತ್ರಿಗಳಾಗಿ ಮಾಡಿದ್ದೀರಿ. ಅವರು ನಮ್ಮ ಪಕ್ಷಕ್ಕೆ ಬಂದರೆ ಹೇಗೆ ಆಗಬಹುದೋ ? ಇನ್ನೂ ಉತ್ತಮ ಸ್ಥಾನಕ್ಕೆ ಹೋಗುತ್ತಿದ್ದರೋ ಏನೋ ಯಾರಿಗೆ ಗೊತ್ತು 51 ಪರ್ಸೆಂಟ್ ಇರತಕ್ಕ ಜನರಲ್ಲಿ ಗೆದ್ದಿರುವವರು ಇಬ್ಬರೇ ಇಬ್ಬರು. ಇನ್ನೊಂದು ಸ್ವಾರಸ್ಯ ಹೇಳುತ್ತೇನೆ. 9 ಜನಕ್ಕೆ ಮಾತ್ರ ಡಿಪಾಸಿಟ್ ಉಳಿಯಿತು ಉಳಿದವರೆಲ್ಲರಿಗೂ ಕೂಡ 27 ಜನಕ್ಕೆ ಡಿಪಾಸಿಟ್ ಹೋಯಿತು ಅವರಿಗೆ ಸಂಖ್ಯಾಬಲವಿಲ್ಲವೇ ? ಇತ್ತು ಏತಕ್ಕೆ ಡಿಪಾಸಿಟ್ ಹೋಯಿತು ಸಿಮಿಲರ್‌ಲಿ ಮೈನಾರಿಟೀಸ್ ಎಷ್ಟು ಜನ ಗೆದ್ದು ಬಂದಿರುವುದು. ಮಹಿಳೆಯರು ಇಬ್ಬರು ಗೆದ್ದಿದ್ದಾರೆ ಅದೇ ರೀತಿ ಇವರೂ ಇಬ್ಬರು ಗೆದ್ದು ಬಂದಿದ್ದಾರೆ. ಈ ಪಕ್ಷದಿಂದ ಒಬ್ಬರು, ಆ ಪಕ್ಷದಿಂದ ಒಬ್ಬರು ಅವರು 10 ಪರ್ಸೆಂಟ್ ಇದ್ದಾರೆ.

ತಾವು ಏನು ಗಗನಕುಸುಮವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೀರಿ, ಅದರಿಂದ ಏನು ಕೇಡಾಗುತ್ತಿದೆ ಎನ್ನುವ ಬಗ್ಗೆ ಆಲೋಚನೆ ಮಾಡಬೇಕು. ಇಂಥ ಮಸೂದೆಯನ್ನು ಜಾರಿಗೆ ತರುವುದಕ್ಕೆ ಶಾಸನ ಸಭೆ ಒಪ್ಪಬಹುದು, ಆದರೆ ನಮ್ಮ ಸಮಾಜ ಇಷ್ಟ ಪಡುವುದಿಲ್ಲ. ನಮ್ಮ ಸಮಾಜದಲ್ಲಿರತಕ್ಕ ಪಟ್ಟಬದ್ಧ ಹಿತಾಸಕ್ತಿಗಳು ಇದುವರೆಗೆ ಯಾವ ಒಂದು ಲಾಭ ಪಡೆಯುತ್ತಿದ್ದರು ಅದನ್ನು ಬೇರೆಯವರು ಪಡೆಯುವುದಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ ನಿಜವಾಗಿ ಲಾಭ ಪಡೆಯಬೇಕಾದವರು ಈ ಒಂದು ಕಾನೂನಿನಿಂದ ದೂರ ಆಗುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ.

ಡಾ|| ಹೆಚ್. ಎಲ್. ತಿಮ್ಮೇಗೌಡ --ಇದಕ್ಕೆ ಪರಿಹಾರ ಏನು ಎನ್ನುವುದನ್ನು ಮಾನ್ಯ ಮಾಜಿ ಮಂತ್ರಿಯವರು ತಿಳಿಸಬೇಕೆಂದು ಹೇಳುತ್ತೇನೆ. ಇವತ್ತು ಹುಣಸೂರು ತಾಲ್ಲೂಕಿನಲ್ಲಿ ಶ್ರೀಮತಿ ಚಂದ್ರಪ್ರಭಾ ಅರಸು ಅವರ ಜಾತಿಗೆ ಸೇರಿದವರು ಎಷ್ಟು ಜನ ಇದ್ದಾರೆ. ಕನಿಷ್ಠ ನೂರು ಜನ ಇರಬಹುದು. ಎಲ್ಲಾ ಕಡೆ ಹಾಗೆ ಆಗುತ್ತೆ ಎಂದು ಹೇಳಬೇಡಿ.

ಶ್ರೀ ವೈ. ರಾಮಕೃಷ್ಣ --ನಾನು ನನ್ನ ವಾದವನ್ನು ಮಂಡಿಸುತ್ತಿದ್ದೇನೆ. ಪರಿಹಾರ ಏನು ಅಂದರೆ ದಯವಿಟ್ಟು ಕ್ಲಾಸ್ 5 (3) ನ್ನು ಡಿಲೀಟ್ ಮಾಡಿ. ಇದನ್ನು ಮಾಡದೇ ಹೋದರೆ ಮತದಾರರು ಅವರನ್ನು ಹೇಗಿದ್ದರೂ ನಾಮಿನೇಟ್ ಮಾಡುತ್ತಾರೆ ; ನಾವು ಏತಕ್ಕೆ ಮತ ಹಾಕಿ ಗೆಲ್ಲಿಸಬೇಕೆಂಬ ತೀರ್ಮಾನಕ್ಕೆ ಬರುತ್ತಾರೆ

ಡಾ|| ಹೆಚ್. ಎಲ್. ತಿಮ್ಮೇಗೌಡ --ಇದನ್ನು ಪ್ರೊವೈಡ್ ಮಾಡದೇ ಹೋದರೆ, ಮೈನಾರಿಟೀಸ್ ಚುನಾವಣೆಗೆ ನಿಲ್ಲುವುದಕ್ಕಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ --ಡೀಲಿಮಿಟೇಷನ್ ಮಾಡಿ ; ರಿಸರ್ವೇಷನ್ ಕಡ್ಡಾಯ ಮಾಡಿ ; ಹಿಂದುಳಿದವರು ಮಾತ್ರ ಚುನಾವಣೆಗೆ ನಿಲ್ಲಬೇಕೆಂದು ಮಾಡಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ --ಯಾವ ಊರಿನಲ್ಲಿಯೂ ಮೈನಾರಿಟೀಸ್ ಬೇರೆ ಬೇರೆ ಕೋಮಿನವರು ಪ್ರತ್ಯೇಕವಾಗಿ ಇರುವುದಿಲ್ಲ. ಇರತಕ್ಕ ಕ್ಲಾಸ್ ತೆಗೆದು ಹಾಕಿದರೆ ಬಹಳ ಕಷ್ಟವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.--ಮಾನ್ಯ ಅಧ್ಯಕ್ಷರೇ, ರಿಸರ್ವೇಷನ್ ಕಂಪಲ್‌ಸರಿ ಮಾಡಿ ಎರಡು ಪರ್ಸೆಂಟ್ ಇರುವುದನ್ನು 5 ಪರ್ಸೆಂಟ್‌ಗೆ ಹೆಚ್ಚಿಸಿ. ಎಷ್ಟು ವರ್ಷಗಳು ನಾಮಿನೇಷನ್ ಮಾಡಕೊಂಡು ಹೋಗುತ್ತೀರಿ. ಕಾನೂನು ಬದ್ಧವಾಗಿ ಚುನಾಯಿತರಾಗಬೇಕೆಂದು ಮಾಡಿ.

ಡಾ|| ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ ರಾಜ್ಯಾಂಗದಲ್ಲಿ ಮೈನಾರಿಟೀಸ್‌ಗೆ ರಿಸರ್ವೇಷನ್ ಇಡುವುದಕ್ಕೆ ಅವಕಾಶ ಮಾಡಿಲ್ಲ ಹರಿಜನರಿಗೆ ಮಾತ್ರ ಇದೆ.

ಶ್ರೀ ವೈ. ರಾಮಕೃಷ್ಣ --ಸ್ವಾಮಿ. ಕೇರಳದಲ್ಲಿ ಈ ರೀತಿ ಇದೆ. ನಾನು ಮಾತನಾಡಿದದ್ದರಲ್ಲಿ ತಪ್ಪು ಇದ್ದರೆ ಒಪ್ಪಿಕೊಳ್ಳುತ್ತೇನೆ. ನಾನು ಮಾತನಾಡಬೇಕಾದರೆ ಅಂಕಿಸಂಖ್ಯೆ ಇಟ್ಟುಕೊಂಡು ಮಾತನಾಡುತ್ತೇನೆ. ನನ್ನ ಉದ್ದೇಶ ಸಾರ್ಥಕವಾಗಬೇಕು ; ತಾವು ಯಾವ ಉದ್ದೇಶದಿಂದ ಈ ಕ್ಲಾಸನ್ನು ಇಟ್ಟಿದ್ದೀರಿ ಆ ಉದ್ದೇಶ ಖಂಡಿತವಾಗಿಯೂ ನೆರವೇರುವುದಿಲ್ಲ, ನ್ಯಾಯಬದ್ಧವಾದ ಚುನಾವಣೆಗಳಲ್ಲಿ ನಿಂತು ಗೆದ್ದು ಬರಲಿ ಎಂದು ಹೇಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿರತಕ್ಕ ಜಿಲ್ಲೆಗಳು ಒಂದೇ ಸಮನಾಗಿ ಇಲ್ಲ. ಒಂದೊಂದು ಜಿಲ್ಲೆಯ ಜನಸಂಖ್ಯೆ ಒಂದೊಂದು ರೀತಿ ಇದೆ. ಜನಗಣತಿಯ ವರದಿ ಪ್ರಕಾರ ಬೆಂಗಳೂರು ಜಿಲ್ಲೆಯ ಜನಸಂಖ್ಯೆ ಸುಮಾರು 50 ಲಕ್ಷ ಇದೆ. ಬೆಳಗಾಂ ಜಿಲ್ಲೆಯ ಜನಸಂಖ್ಯೆ 30 ಲಕ್ಷ ಇದೆ ; ಧಾರವಾಡ ಜಿಲ್ಲೆಯ ಜನಸಂಖ್ಯೆ 20 ಲಕ್ಷ ಇದೆ ಕೊಡಗು ಜಿಲ್ಲೆಯ ಜನಸಂಖ್ಯೆ 4 ಲಕ್ಷ ಇದೆ. ತಾವು ಡೀಲಿಮಿಟೇಷನ್‌ನಲ್ಲಿ ಒಂದು ಮಾಡಿದ್ದೀರಿ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಂತ ಮಲೆನಾಡಿನಲ್ಲಿ ಸುಮಾರು 5,000 ಜನಸಂಖ್ಯೆ ಇದ್ದರೆ ಸಾಕು ಮಂಡಲ ಪಂಚಾಯಿತಿ ಮಾಡಬಹುದೆಂದು ಮಾಡಿದ್ದೀರಿ. ಇದೇ ಒಂದು ತತ್ವವನ್ನು ಎಲ್ಲಾ ಜಿಲ್ಲೆಗಳಿಗೂ ಏತಕ್ಕೆ ಅನ್ವಯಿಸಲಿಲ್ಲ. ವಿಧಾನ ಸಭೆ ಚುನಾವಣೆ ಪದ್ಧತಿಯಲ್ಲಿ ಯಾವರೀತಿ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೋ ಅದೇರೀತಿಯ ಒಂದು ವ್ಯವಸ್ಥೆಯನ್ನು ಇಲ್ಲೂ ಕೂಡ ಅಳವಡಿಸಬಹುದಾಗಿತ್ತು ಎಂದು ಹೇಳುತ್ತೇನೆ. ಇವತ್ತು 35,000 ಜನಸಂಖ್ಯೆಗೆ ಒಬ್ಬರಂತೆ ಚುನಾಯಿತರಾಗಿ ಬಂದರೆ ; ಇರತಕ್ಕ ವಿಷಯಗಳ ಮೇಲೆ ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ. ಸುಮಾರು ಒಂದು ವಾರ ಕೂತುಕೊಂಡರೂ ಅಭಿವೃದ್ಧಿ ಕೆಲಸ ಕಾರ್ಯಗಳ ಬಗ್ಗೆ ಮಾತನಾಡುವುದು ಆಗುವುದಿಲ್ಲ. ಇದರ ಕಡೆ ಸರ್ಕಾರದವರು ಗಮನಕೊಡಬೇಕೆಂದು ಹೇಳುತ್ತೇನೆ. ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳ ಬಗ್ಗೆ 24 ವರ್ಷಗಳ ಇತಿಹಾಸ ಇದೆ, ನಾವು ಡಿಸ್ಟ್ರಿಕ್ಟ್ ಬೋರ್ಡುಗಳನ್ನು ಬಹಿಷ್ಕರಿಸಿದಂಥಾ ಜನ ; ನ್ಯಾಯ ಪಂಚಾಯಿತಿಗಳು ಬೇಡ ಎಂದು ಹೇಳಿದಂಥ ಜನ. ಇವತ್ತು ರೆವಿನ್ಯೂ ತಾಲ್ಲೂಕುಗಳಿಗೆ ಹೊಂದಿಕೊಂಡ ಹಾಗೆ ತಾಲ್ಲೂಕ್ ಬೋರ್ಡುಗಳು ರಚನೆ ಮಾಡಿದ್ದಾರೆ. ಇಲ್ಲಿ ಅಭಿವೃದ್ಧಿ ಕೆಲಸವನ್ನು ಮತ್ತು ಸರ್ಕಾರದ ಕೆಲಸವನ್ನು ಜೊತೆಯಲ್ಲಿಯೇ ನೋಡಬೇಕು. Taluk Board Development work and Government work go together. We recognise village as a unit, village panchayat as a unit. ವಿಕೇಂದ್ರೀಕರಣ ಅಂದರೆ ಏನು ? ಗ್ರಾಮಾಂತರ ಪ್ರದೇಶದಲ್ಲಿ ಜನತೆಯ ಕೈಗೆ ಅಧಿಕಾರ ಕೊಡಬೇಕೆಂಬುದು. ಅಲ್ಲದೆ ಅಭಿವೃದ್ಧಿ ಕೆಲಸಗಳನ್ನು ನಡೆಸಿಕೊಂಡು ಹೋಗುವುದು 4,000 ಜನಸಂಖ್ಯೆಗೆ ಒಂದು ಪಂಚಾಯಿತಿ ಇರುವುದನ್ನು ತೆಗೆದು ; 10-12,000 ಜನಸಂಖ್ಯೆಗೆ ಒಂದು ಮಂಡಲ್ ಪಚಾಯಿತಿ ಮಾಡಬೇಕೆಂದು ಹೊರಟಿದ್ದೀರಲ್ಲಾ ; ಇದು ಕೇಂದ್ರೀಕರಣವೋ ವಿಕೇಂದ್ರೀಕರಣವೋ ? It is a retrograde step. It is not a forward sted. you can bring or amendment. Pleose make it to work more effectively. ನಮ್ಮ ಜನ ಕಳೆದ 24 ವರ್ಷಗಳಿಂದ ಫಲ ಪಡೆದಿದ್ದಾರೆ ; ಸಮರ್ಪಕವಾಗಿ ಕೆಲಸ ಮಾಡದೇ ಇರಬಹುದು ; ಕಾನೂನಿನಲ್ಲಿ ದೋಷ ಇದ್ದರೆ ತಿದ್ದಿ ; ಪ್ರತಿಯೊಬ್ಬ ಪ್ರಜೆಗೂ ತಲಾ 10 ರೂಪಾಯಿ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದನ್ನೇ ಈಗ ಇರತಕ್ಕ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟು ಕಡ್ಡಾಯವಾಗಿ ಈ ಹಣವನ್ನು ಖರ್ಚು ಮಾಡಬೇಕೆಂದು ಕಾನೂನು ಮಾಡಿ. ಐದು ವರ್ಷ ಕೊಟ್ಟು ನೋಡಿ ; ಒಂದುವೇಳೆ ಕೆಲಸ ಮಾಡದೇ ಇದ್ದರೆ ಆಗ ಇಂಥ ಕಾನೂನು ತೆಗೆದುಕೊಂಡು ಬನ್ನಿ. ಈ ಕಾನೂನಿನಲ್ಲಿಯೂ ಬಹಳ ತೊಡಕುಗಳು ಇರುವುದರಿಂದ ವಿಕೇಂದ್ರೀಕರಣವಾಗುವುದಿಲ್ಲ. ಸ್ವಾಮಿ, ನನ್ನ ಮನಸ್ಸಿಗೆ ತೋಚಿದಂಥ ಸಲಹೆಗಳನ್ನು ಕೊಟ್ಟಿದ್ದೇನೆ ; ಸದ್ಯಕ್ಕೆ ಈ ಮಸೂದೆಯನ್ನು ಜಾರಿಗೆ ತರುವುದಕ್ಕೆ ಕಾಲ ಪರಿಪಕ್ವವಾಗಿಲ್ಲ, ಅದಕ್ಕಾಗಿ ಇದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-30 A. M.

† ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) — ಸನ್ಮಾನ್ಯ ಅಧ್ಯಕ್ಷರೇ, ಈವತ್ತು ಪಂಚಾಯತ್ ರಾಜ್ಯ ವ್ಯವಸ್ಥೆಯ ಮೂಲಕ ಹಳ್ಳಿಗಾಡಿನ ಆರ್ಥಿಕ ಬೆಳವಣಿಗೆ ಮತ್ತು ಅಲ್ಲಿನ ಸಾಮಾಜಿಕ ಬದಲಾವಣೆಯನ್ನು ತರತಕ್ಕಂಥ ದಿಕ್ಕಿನಲ್ಲಿ ಇಟ್ಟಿರತಕ್ಕ ಒಂದು ಪ್ರಾಮಾಣಿಕವಾದ ಹೆಜ್ಜೆಯಾಗಿದೆ. ಈ ಮಸೂದೆ ಬಹಳ ಮಹತ್ವಪೂರ್ಣವಾದಂಥ ಮಸೂದೆಯಾಗಿದೆ ಆದುದರಿಂದ ಇದನ್ನು ನಾನು ಸ್ವಾಗತ ಮಾಡಲಿಕ್ಕೆ ಬಯಸುತ್ತೇನೆ. ಈ ಒಂದು ಮಸೂದೆಯಲ್ಲಿ ಮಹತ್ತರವಾದಂಥ ಉದ್ದೇಶವನ್ನಿಟ್ಟುಕೊಂಡು ತರುತ್ತಿದ್ದಾರೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದರಲ್ಲೂ ಭಾರತದಂಥ ಹಳ್ಳಿಗಾಡಿನ ದೇಶದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಮಹತ್ತರವಾದಂಥ ಪಾತ್ರವನ್ನು ವಹಿಸುತ್ತದೆ. ಪ್ರಜಾಪ್ರಭುತ್ವ ಮತ್ತು ಪಂಚಾಯತ್ ರಾಜ್ಯ ವ್ಯವಸ್ಥೆ ಒಂದೊಂದು ಅವಲಂಬಿಸಿಕೊಂಡಿರತಕ್ಕ ಅಂಶವಾಗಿದೆ. ಹೇಗೆ ಪ್ರಜಾಪ್ರಭುತ್ವ ಸಮಾಜವಾದವನ್ನು ಬಿಟ್ಟು ಬದುಕುವುದಕ್ಕೆ ಸಾಧ್ಯವಿಲ್ಲವೋ ಹಾಗೇನೇ ಸಮಾಜವಾದವನ್ನು ಬಿಟ್ಟು ಪ್ರಜಾಪ್ರಭುತ್ವ ಇರಲಿಕ್ಕೆ ಸಾಧ್ಯವಿಲ್ಲ ಹಾಗೇನೇ ಪ್ರಜಾಪ್ರಭುತ್ವದಲ್ಲಿ ಪಂಚಾಯತ್ ವ್ಯವಸ್ಥೆ ಬಿಟ್ಟು ಬದುಕುವುದಕ್ಕೆ ಸಾಧ್ಯವಿಲ್ಲ. ನಾನು ಹೇಳುವಂಥಾ ವಿಷಯವನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ವಿಕೇಂದ್ರೀಕರಣ ಈ ಮಸೂದೆಯ ಮೂಲ ತತ್ವವಾಗಿದೆ. ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣ ಒಂದಕ್ಕೊಂದು ಪೂರಕವಾಗಿದೆ ಎನ್ನತಕ್ಕದ್ದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು ಆ ದೃಷ್ಟಿಯಿಂದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ, ಸಾಮಾನ್ಯ ಜನರೂ ಕೂಡ ದೇಶದಲ್ಲಿನ ಆಗುಹೋಗುಗಳಲ್ಲಿ ಸಮಾನವಾಗಿ ಪಾಲ್ಗೊಳ್ಳದೇ ಹೋದರೆ ಪ್ರಜಾಪ್ರಭುತ್ವಕ್ಕೆ ಅರ್ಥವಿರುವುದಿಲ್ಲ ಅದು ವಿಕೇಂದ್ರೀಕರಣದ ಅರ್ಥವಲ್ಲ ಎಂದು ಹೇಳತಕ್ಕದ್ದು ನನ್ನ ಅಭಿಪ್ರಾಯ. ರಾಜ್ಯಾಂಗದಲ್ಲಿ ಈ ಪಂಚಾಯತ್ ವ್ಯವಸ್ಥೆ ಬಗ್ಗೆ ಮತ್ತು ಪಂಚಾಯತ್ ಆಡಳಿತದ ಬಗ್ಗೆ ಸ್ಪಷ್ಟವಾಗಿ ಎಲ್ಲೂ ಕೂಡ ನಿರೂಪಣೆಯನ್ನು ಮಾಡಿಲ್ಲ ನಮಗೆ ಸ್ವಾತಂತ್ರ್ಯ ಬಂದು 35-36 ವರ್ಷಗಳಾದರೂ ಕೂಡ ಅಧಿಕಾರ ಕೇಂದ್ರೀಕರಣವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಪಂಚಾಯತ್ ರಾಜ್ಯ ವ್ಯವಸ್ಥೆಯಾಗಬೇಕು, ಎನ್ನತಕ್ಕದ್ದು ಈವತ್ತಿನ ಕಲ್ಪನೆಯಲ್ಲ. ನಮ್ಮ ಭಾರತ ದೇಶದಲ್ಲಿ ಈ ಪಂಚಾಯತ್ ರಾಜ್ಯ ವ್ಯವಸ್ಥೆ ಹೊಸದೇನೂ ಅಲ್ಲ. ಬ್ರಿಟೀಷರು ನಮ್ಮ ದೇಶಕ್ಕೆ ಬರುವುದಕ್ಕೆ ಮುಂಚಿತವಾಗಿ ಪೂರ್ವದಲ್ಲೂ ಕೂಡ ಪಂಚಾಯತ್ ವ್ಯವಸ್ಥೆ ನಮ್ಮ ದೇಶದಲ್ಲಿತ್ತು. ಪಂಚಾಯತ್ ರಾಜ್ಯ ವ್ಯವಸ್ಥೆ ಈ ದೇಶಕ್ಕೆ ಅತ್ಯಂತ ಸಮರ್ಪಕವಾಗಿ ಹೊಂದಿಕೊಳ್ಳತಕ್ಕಂಥ ಒಂದು ಆಡಳಿತ ವ್ಯವಸ್ಥೆಯಾಗಿದೆ. ಮಹಾತ್ಮ ಗಾಂಧೀಜಿಯವರೂ ಕೂಡ ಹೇಳಿದ್ದರು ಈ ದೇಶಕ್ಕೆ ಸರಿಯಾದಂಥ ಒಂದು ಆಡಳಿತ ವ್ಯವಸ್ಥೆಯಾಗಬೇಕಾಗಿದ್ದರೆ ಅಥವಾ ಗ್ರಾಮ ಸ್ವರಾಜ್ಯವಾಗಬೇಕಾಗಿದ್ದರೆ ಅದು ಪಂಚಾಯತ್ ರಾಜ್ಯ ವ್ಯವಸ್ಥೆ ಮೂಲಕವೇ ಹೊರತು ಬೇರೆ ಯಾವುದೇ ವ್ಯವಸ್ಥೆಯ ಮೂಲಕ ಈ ಆಡಳಿತವನ್ನು ಸುಧಾರಣೆ ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿದ್ದರು. ಆದರೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ರಾಜಕಾರಣಿಗಳು ಅಧಿಕಾರವಷ್ಟೇ ಬಹಳ ಮುಖ್ಯ ಎಂದು ತಿಳಿದು ಕೊಂಡರು. ಮಹಾತ್ಮ ಗಾಂಧೀಜಿಯವರ ಆಸೆ ಏನಾಗಿತ್ತು ಎಂದರೆ ದಲಿತ ವರ್ಗದವರು, ಹಿಂದುಳಿದ ವರ್ಗದವರು, ಜನಸಾಮಾನ್ಯರು ಏನಿದ್ದಾರೆ ಅವರು ಆಡಳಿತದಲ್ಲಿ ಮೂರು ಮುಖಗಳು ಏನಿವೆ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ, ಇದರಲ್ಲಿ ಅವರೆಲ್ಲರೂ ಸಂಪೂರ್ಣವಾಗಿ ಪಾಲ್ಗೊಳ್ಳಬೇಕೆಂದು ಇಚ್ಛಿಸಿದ್ದರು. ಆ ತತ್ವವನ್ನು ನಮ್ಮ ದೇಶಕ್ಕೆ ಕೊಟ್ಟಿದ್ದರು, ನಾವು ಈ ಮಸೂದೆಯ ಮೂಲಕ ಅವರು ಏನು ನಮಗೆ ಹೇಳಿ ಹೋಗಿದ್ದಾರೆ, ಗ್ರಾಮ ಸ್ವರಾಜ್ಯ ನಿರ್ಮಾಣ ಮಾಡತಕ್ಕ ಒಂದು ಮಹತ್ತರವಾದ ಬದಲಾವಣೆಯನ್ನು ತರುತ್ತೇವೆ ಎನ್ನತಕ್ಕ ಒಂದು ಭ್ರಮೆಯನ್ನು ಇಟ್ಟುಕೊಂಡಿಲ್ಲ. ಆದರೆ ನಮ್ಮ ರಾಜ್ಯದ ಅಧಿಕಾರದೊಳಗೆ, ರಾಜ್ಯಾಂಗದಲ್ಲಿ ಕೊಟ್ಟಿರತಕ್ಕ ಕಾನೂನಿನ ವ್ಯಾಪ್ತಿಯೊಳಗೆ ನಮ್ಮ ರಾಜ್ಯದ ಎಲ್ಲಾ ಸಂಪೂರ್ಣವಾದ ಅಧಿಕಾರವನ್ನು ಬಳಸಿಕೊಂಡು ಅದನ್ನು ವಿಕೇಂದ್ರೀಕರಣವನ್ನು ತರಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಈ ಮಸೂದೆಯ ಮೂಲಕ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ ಈ ಮಸೂದೆಯು ಒಂದು ಸೈದ್ಧಾಂತಿಕ ಮತ್ತು ಐತಿಹಾಸಿಕ ಹಿನ್ನೆಲೆಯುಳ್ಳಂಥ ಒಂದು ಮಸೂದೆಯಾಗಿದೆ. ಸ್ವಾತಂತ್ರ್ಯ ಬಂದ ಮೇಲೆ ಬಲವಂತರಾವ್ ಮೆಹತಾರವರು 1957 ರಲ್ಲಿ ಒಂದು ವರದಿಯನ್ನು ಕೊಟ್ಟರು. ಆ ಒಂದು ವರದಿಯ ಆಧಾರದ ಮೇಲೆ ಪಂಚಾಯತ್ ವ್ಯವಸ್ಥೆಯನ್ನು ಅನೇಕ ರಾಜ್ಯಗಳಲ್ಲಿ ನಾವು ಕಾನೂನು ಮೂಲಕ ಮಾಡಿಕೊಂಡಿರತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ 1958 ನೇ

ಇಸ್ಸಿಯಲ್ಲಿ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯನ್ನು ಮಾಡಿಕೊಂಡು ಆ ಮೂಲಕ ನಾವು ಪಂಚಾಯತ್ ವ್ಯವಸ್ಥೆ ಮೂಲಕ ಆಡಳಿತವನ್ನು ಮಾಡಬೇಕು, ವಿಕೇಂದ್ರೀಕರಣ ಮಾಡಬೇಕು ಎನ್ನತಕ್ಕದ್ದನ್ನು ನಾವು ತಂದಿದ್ದೇವೆ. ಆದರೆ ಇವತ್ತು ಈ ಒಂದು ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಎಷ್ಟರಮಟ್ಟಿಗೆ ಆರ್ಥಿಕ ಬೆಳವಣಿಗೆಯನ್ನು ಮತ್ತು ಸಮಾಜಿಕ ಬದಲಾವಣೆಯನ್ನು ತರಲಿಕ್ಕೆ ಆಗುತ್ತದೆ ಎನ್ನತಕ್ಕದ್ದನ್ನು ನಾವು ನೋಡಬಹುದಾಗಿದೆ. ಇವತ್ತು ಇದರಲ್ಲಿರತಕ್ಕ ಪರಿಣಾಮಗಳನ್ನು ನೋಡಿದಾಗ ಮತ್ತು ನಾನು ಕೂಡ ತಾಲ್ಲೂಕ್ ಅಭಿವೃದ್ಧಿ ಮಂಡಲಿಯಲ್ಲಿ 5 ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ ಒಂದು ಅನುಭವದ ಮೇಲೆ ಹೇಳಬೇಕೆಂದರೆ ಇಂದು ನಿರ್ಜೀವವಾದ ಅಸ್ಥಿಪಂಜರವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಕಾರಣವಾದರೂ ಇಷ್ಟೇ ನೌಕರಶಾಹೀ ಬಂಧನದಲ್ಲಿ ಈ ಸಂಸ್ಥೆಗಳು ಒಳಗಾಗಿ ಹಳ್ಳಿಗಳಲ್ಲಿರತಕ್ಕ ಪಂಚಾಯತ್‌ಗಳು ಆರ್ಥಿಕ, ಸಾಮಾಜಿಕ ಬದಲಾವಣೆಯನ್ನು ತರಲಿಕ್ಕೆ ಆಗಲಿಲ್ಲ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರು ಈ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು ಅವು ಜನತೆಗೆ ಹತ್ತಿರವಿರಬೇಕು ಎನ್ನತಕ್ಕ ಸಲಹೆಯನ್ನು ಕೊಟ್ಟರು. ನಾನಾದರೂ ಕೂಡ ತಾತ್ವಿಕವಾಗಿ ಜನತೆಗೆ ಅಧಿಕಾರ ಅತ್ಯಂತ ಹತ್ತಿರದಲ್ಲಿರಬೇಕು ಎನ್ನತಕ್ಕ ನಿಲುವನ್ನು ತಾತ್ವಿಕವಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ಈಗಿರತಕ್ಕವುಗಳು ಸಾಮಾನ್ಯವಾದ ಒಂದು ಗಾತ್ರದ್ದು ಆಗಿರದೇ ಆ ಪಂಚಾಯತ್‌ಗಳ ಚೇರ್ಮನ್‌ರವರು ಕೆಲಸಕಾರ್ಯಗಳನ್ನು ಸಹ ಮಾಡಿಸುವುದಕ್ಕೆ ಹಣವಿಲ್ಲದೇ ಇರತಕ್ಕಂಥ ಪರಿಸ್ಥಿತಿ ಇದ್ದು ಅವುಗಳು ಸೋಲನ್ನು ಅನುಭವಿಸತಕ್ಕ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಈಗಿನ ವ್ಯವಸ್ಥೆಯಲ್ಲಿ ನಾವು ಯಾವುದೇ ಬದಲಾವಣೆಯನ್ನು ತರಲಿಕ್ಕೆ ಸಾಧ್ಯವಿಲ್ಲವೆಂದು ಈಗ ನಾವು ಇನ್ನು ಹೆಚ್ಚ ಗಾತ್ರದ ಮಂಡಲ್ ಪಂಚಾಯತ್‌ಗಳ ರೂಪದಲ್ಲಿ ಮಾಡಿ ಅವು ಜನತೆಯ ಹತ್ತಿರಕ್ಕೆ ಸಂಸ್ಥೆಗಳನ್ನಾಗಿ ನಿರ್ಮಾಣ ಮಾಡತಕ್ಕ ಮಸೂದೆ ಇದಾಗಿದೆ. ಮಂಡಲ್ ಪಂಚಾಯತ್‌ನಲ್ಲಿ ಸುಮಾರು 10 ಸಾವಿರ 11 ಸಾವಿರ ಜನಸಂಖ್ಯೆಗೆ ಅನುಗುಣವಾಗಿ ಒಂದೊಂದು ಮಂಡಲ್ ಪಂಚಾಯತ್‌ನ್ನು ನಿರ್ಮಾಣ ಮಾಡತಕ್ಕ ಒಂದು ವ್ಯವಸ್ಥೆಯನ್ನು ಈ ಮಸೂದೆಯಲ್ಲಿ ನಾವು ಮಾಡಿದ್ದೇವೆ. ಇದರಲ್ಲಿ ತಂತ್ರಜ್ಞಾನವನ್ನು ಬೆಳೆಸಿಕೊಳ್ಳುವುದಕ್ಕೆ ಮತ್ತು ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ದೊಡ್ಡ ಗಾತ್ರದ್ದಾಗಿ ಇದನ್ನು ಮಾಡಿದ್ದೀರಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ.

ಆದರೆ ಇದರ ಗಾತ್ರ ಬಹಳ ಸಣ್ಣದಾಯಿತೆನ್ನುವುದು ನನ್ನ ಅಭಿಪ್ರಾಯ ಹೇಗೆಂದರೆ ಹತ್ತು ಹದಿನೈದು ಸಾವಿರ ಜನಸಂಖ್ಯೆಗೆ, ಒಳಪಟ್ಟಂತೆ ಮಂಡಲ್ ಪಂಚಾಯತಿ ಇದ್ದರೆ ಹೆಚ್ಚಿನ ರೀತಿಯಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ಹಾಗೂ ತಂತ್ರಜ್ಞಾನವನ್ನು ಬಳಸಿಕೊಂಡು ಆರ್ಥಿಕ ಬೆಳವಣಿಗೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಹಕಾರಿಯಾಗುತ್ತದೆ. ಎಂದು ಹೇಳುತ್ತೇನೆ. ಇದರಿಂದ ಸಾಮಾಜಿಕ ಬದಲಾವಣೆಗೆ ಹೆಚ್ಚು ಸಹಕಾರಿಯಾಗುತ್ತದೆ ಎನ್ನುವ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಜನಸಂಖ್ಯೆಯನ್ನೊಳಗೊಂಡಂಥ ಒಂದು ತಿದ್ದುಪಡಿಯನ್ನು ತರತಕ್ಕಂಥಾದ್ದು ಸೂಕ್ತವೆಂದು ಹೇಳುತ್ತೇನೆ. ಈ ಮಸೂದೆಯ ಮೂಲಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾಯಿತ ಪ್ರತಿನಿಧಿಗಳ ಸಭೆಯನ್ನು ತೆಗೆದು ಹಾಕಲಾಗುತ್ತಿದೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಅಧಿಕಾರವನ್ನು ಮಂಡಲ್ ಪಂಚಾಯತಿಗಳಿಗೆ ವರ್ಗಾವಣೆ ಮಾಡತಕ್ಕಂಥ ಕೆಲಸವನ್ನೂ ಕೂಡಾ ಈ ಮಸೂದೆಯ ಮೂಲಕ ಮಾಡಲಾಗುತ್ತಿದೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಹಳ್ಳಿಗಾಡಿನ ಜನತೆಯಿಂದ ದೂರ ಇದ್ದವು, ಅವುಗಳನ್ನು ಹತ್ತಿರಕ್ಕೆ ಬರುವಂಥ ಕೆಲಸ ಮಾಡುತ್ತಿರುವುದರಿಂದ ಚುನಾಯಿತ ಸದಸ್ಯರಲ್ಲದೆ, ಎಲ್ಲಾ ಮಂಡಲ್ ಪಂಚಾಯತಿಯ ಅಧ್ಯಕ್ಷರು, ಅಲ್ಲಿ ಬರತಕ್ಕಂಥ ಶಾಸಕರು, ಸೊಸೈಟಿಗಳ ಅಧ್ಯಕ್ಷರುಗಳು ಸೇರಿರತಕ್ಕಂಥ ಒಂದು ಸಮಿತಿಯನ್ನು ರಚನೆ ಮಾಡಿ, ಅಲ್ಲಿ ಆಗತಕ್ಕಂಥ ಕೆಲಸಗಳನ್ನು ಪರಿಶೀಲನೆ ಮಾಡತಕ್ಕಂಥಾದ್ದು ಸಲಹೆಗಳನ್ನು ಕೊಡತಕ್ಕಂಥ ಮೂಲಭೂತವಾದ ಉದ್ದೇಶವನ್ನು ಈ ಮಸೂದೆಯಲ್ಲಿ ಅಳವಡಿಸಲಾಗಿದೆ. ಇದರಲ್ಲಿ ಎರಡು ಅಂತರದ ಪಂಚಾಯತಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಒಂದು ಮಂಡಲ್ ಪಂಚಾಯತಿ, ಎರಡನೆಯದು ಜಿಲ್ಲಾ ಪರಿಷತ್ತು, ಇವುಗಳ ಮಧ್ಯೆ ಗ್ರಾಮ ಸಭಾ ನಿರ್ಮಾಣ ಮಾಡಿ, ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಗಳ ನಡುವೆ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಅಭಿವೃದ್ಧಿ ಸಮಿತಿಗಳನ್ನು ನಿರ್ಮಾಣ ಮಾಡಿ, ಈ ಎರಡೂ ಸಮಿತಿಗಳ ಜೊತೆಗೆ ಚುನಾಯಿತ ಸದಸ್ಯರಲ್ಲದ ಮಂಡಲ್ ಪಂಚಾಯತಿಯ ಅಧ್ಯಕ್ಷರು, ಹಾಗೂ ಶಾಸಕರೂ ಇರತಕ್ಕಂಥ ಸಲಹಾ ಸಮಿತಿ

ಯನ್ನು ಮಾಡಿ, ಇಡೀ ಹಿಂದೂಸ್ಥಾನದಲ್ಲಿ ಎರಡೂ ಪಂಚಾಯತಿ ವ್ಯವಸ್ಥೆಯು ಅಗತ್ಯವಿರುವುದರಿಂದ ರಾಜ್ಯದಲ್ಲಿ ಇಡೀ ಜಿಲ್ಲೆಯನ್ನು ಒಂದು ಘಟಕವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಅಭಿವೃದ್ಧಿ ಘಟಕವನ್ನಾಗಿ ತೆಗೆದುಕೊಂಡಾಗ ಮಾತ್ರ ಅಭಿವೃದ್ಧಿ ಮಾಡಲಿಕ್ಕೆ ಪ್ರಕ್ರಿಯೆಗಳಲ್ಲಿ ಜನರನ್ನು ಸಂಪೂರ್ಣವಾಗಿ ಪಾಲುದಾರರನ್ನಾಗಿ ಮಾಡುವುದಕ್ಕೆ ಸಾಧ್ಯ. ಎಲ್ಲಾ ತಂತ್ರಜ್ಞಾನವನ್ನು, ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಜಿಲ್ಲೆಯ ಅಭಿವೃದ್ಧಿಯ ಘಟಕಕ್ಕೆ ಅಗತ್ಯವಿರುತ್ತದೆ. ದೃಷ್ಟಿಯಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಗಳನ್ನು ಎರಡು ಘಟಕಗಳನ್ನಾಗಿ ಮಾಡಿ. ಮಂಡಲ್ ಪಂಚಾಯತಿ ಜನತೆಯ ಹತ್ತಿರವಾದಂಥ ಘಟಕವಾಗಿ, ತನ್ನ ಕಾರ್ಯವನ್ನು ಮಾಡುತ್ತದೆ. ಇದರಿಂದ ಅಧಿಕಾರ ವಿಕೇಂದ್ರೀಕರಣ ಮಾಡಿದಂತಾಗುತ್ತದೆ

ಈ ಮಸೂದೆ ನನ್ನ ಅಭಿಪ್ರಾಯದಲ್ಲಿ ಬರೀ ಅಧಿಕಾರವನ್ನು ವಿಕೇಂದ್ರೀಕರಣ ಮಾಡತಕ್ಕಂಥದಲ್ಲ ಎನ್ನುವುದು ನನ್ನ ಅಭಿಪ್ರಾಯ. ಜನತಂತ್ರ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವನ್ನು ವಿಕೇಂದ್ರೀಕರಣ ಮಾಡತಕ್ಕಂಥ ಮಸೂದೆ. ಜನತೆ ನೇರವಾಗಿ ಅದರಲ್ಲಿಯೂ ಬಡವರು ಹಾಗೂ ಸಾಮಾನ್ಯ ಜನರೂ ಕೂಡಾ ದೇಶದ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಭಾಗಿಗಳಾಗಿ ಪಾಲುಗಾರರಾಗಿ ಅದರ ಫಲವನ್ನು ಅನುಭವಿಸುವುದಿಲ್ಲವೋ, ಆ ಭಾವನೆ ಜನತೆಯಲ್ಲಿ ಎಲ್ಲಿಯವರೆಗೆ ಬೆಳೆಯುವುದಿಲ್ಲವೋ, ಅಲ್ಲಿಯವರೆಗೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ. ಇತಿಹಾಸಕಾರ ಮಾನ್ಯ ಥಿಯೋಡರ್ ಅವರು ಪ್ರಜಾಪ್ರಭುತ್ವದ ಬಗ್ಗೆ ವಿವರಣೆ ಕೊಡುತ್ತಾ, ಈ ರೀತಿ ಹೇಳುತ್ತಾರೆ. "ನಾನೂ ನಿನ್ನಷ್ಟೇ ಒಳ್ಳೆಯವನು ಅಂದರೆ, ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲ. ನೀನು ನನ್ನಷ್ಟೇ ಒಳ್ಳೆಯವನು ಅಂದರೆ ಪ್ರಜಾಪ್ರಭುತ್ವದ ಅರ್ಥವಿದೆ" ಇದನ್ನು ಮರೆತರೆ ಪ್ರಜಾಪ್ರಭುತ್ವ ಸರ್ವನಾಶವಾಗುತ್ತದೆ. ಸಾಮಾನ್ಯ ಜನರೂ ಕೂಡಾ ಅದರಲ್ಲಿಯೂ ಅತ್ಯಂತ ಕೆಳ ಮಟ್ಟದಲ್ಲಿರತಕ್ಕಂಥ ಜನತೆ ಆಡಳಿತ ವ್ಯವಸ್ಥೆಯಲ್ಲಿ ಭಾಗಿಗಳಾದರೆ ಪ್ರಜಾಪ್ರಭುತ್ವ ನ್ಯಾಯಗಳು ಯಶಸ್ವಿಯಾಗುತ್ತವೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ತಳಪಾಯದಿಂದ ಬೆಳೆಯಬೇಕು. ಇದು ವಿಶಾಲವಾದ ತಳಪಾಯದ ಮೇಲೆ ಭದ್ರವಾಗಿ ನಿಂತುಕೊಂಡಾಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಈ ಮಸೂದೆಯ ಉದ್ದೇಶವೂ ಕೂಡಾ ಅದೇ ಆಗಿದೆಯೆನ್ನುವುದು ನನ್ನ ಅಭಿಪ್ರಾಯ. ಈ ಮಸೂದೆಯ ಮೂಲಕ ಇಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಹೋಗಿ, ಜಿಲ್ಲಾ ಅಭಿವೃದ್ಧಿ ಸಮಿತಿಗಳು, ಏರ್ಪಾಡಾಗಲಿವೆ. ಇದರಲ್ಲಿ ಸಂಪೂರ್ಣವಾಗಿ, ಜಿಲ್ಲಾಧಿಕಾರಿಯ ಹಿಡಿತದಲ್ಲಿ ಸಿಕ್ಕಿಕೊಂಡಿದೆ. ಇದರಿಂದ ಬಿಡುಗಡೆ ಮಾಡಿ, ಚುನಾಯಿತ ಪ್ರತಿನಿಧಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ, ಜನರ ಕಲ್ಯಾಣವನ್ನು ರೂಪಿಸಿಕೊಳ್ಳುವುದಕ್ಕೆ ಅಧಿಕಾರವನ್ನು ಕೊಡುವಂಥಾದು ಈ ಮಸೂದೆಯ ಮೂಲ ಉದ್ದೇಶವಾಗಿರುವುದರಿಂದ, ಇದು ಪ್ರಗತಿದಾಯಕವಾದ ಹೆಜ್ಜೆಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಚೌಡಯ್ಯನವರು ಕೂಡಾ ಈ ಮಸೂದೆಯನ್ನು ಸ್ವಾಗತ ಮಾಡಿದ್ದಾರೆ. ಇವೊತ್ತು ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವುದಕ್ಕೆ ಸಂಪನ್ಮೂಲಗಳನ್ನು ರೂಪಿಸಿಕೊಳ್ಳುವುದಕ್ಕೆ ಎಲ್ಲಾ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಡತಕ್ಕಂಥಾದ್ದು, ಸ್ವಾಗತಾರ್ಹವಾದ ಅಂಶ ಮತ್ತು ಕ್ರಾಂತಿಕಾರಕವಾದಂಥ ಮಸೂದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜಿಲ್ಲಾ ಪರಿಷತ್ತಿಗೆ ಹಣವನ್ನು ತಾವೇ ಖರ್ಚು ಮಾಡತಕ್ಕಂಥ ಅಧಿಕಾರವನ್ನು ಮತ್ತು ಆಯವ್ಯಯದ ಮುಗಿದ ತಕ್ಷಣವೇ ಅಭಿವೃದ್ಧಿ ಮತ್ತು ನಾನ್ ಅಭಿವೃದ್ಧಿಗೆ ಹೋಗತಕ್ಕಂಥ ಎಲ್ಲಾ ಹಣವನ್ನು ಜಿಲ್ಲಾ ಪರಿಷತ್ತಿಗೆ ಹೋಗಬೇಕೆನ್ನುವ ವಿಧಿಯನ್ನು ಏನು ಸೇರಿಸಿದ್ದಾರೆ, ಇದು ಕ್ರಾಂತಿಕಾರಕವಾದ ಬದಲಾವಣೆ. ಇವೊತ್ತು ಪಂಚಾಯತಿ ವ್ಯವಸ್ಥೆ, ಇಡೀ ದೇಶದಲ್ಲಿ ಸೋತಿದೆ. ಹಣಕಾಸಿನ ವ್ಯವಸ್ಥೆ ಕೂಡಾ ಕೆಟ್ಟಿದೆ. ಪಂಚಾಯತಿ ವ್ಯವಸ್ಥೆಯಲ್ಲಿ ಜನತೆ ಸಕ್ರಿಯವಾಗಿ ಪಾಲುಗೊಳ್ಳುತ್ತಿಲ್ಲ. ಇವೊತ್ತು ರಾಜ್ಯದಲ್ಲಿರತಕ್ಕ ನಾಲ್ಕೈದು ಸಾವಿರ ಪಂಚಾಯತಿಗಳಲ್ಲಿ ಜನತೆ ಸ್ವಾಭಾವಿಕವಾಗಿ ತೊಂದರೆಗೆ ಗುರಿಯಾಗಿದ್ದಾರೆ. ಈ ಮಸೂದೆಯ ಮೂಲಕ ಕೆಳಗಿನ ಜನತೆಗೆ ಅಭಿವೃದ್ಧಿ ಕಾರ್ಯಗಳ ಫಲವನ್ನು ಮುಟ್ಟಿಸತಕ್ಕ ಒಂದು ವ್ಯವಸ್ಥೆಯನ್ನು ಆ ದಿಕ್ಕಿನಲ್ಲಿ ಮಾಡಿದ್ದಾರೆನ್ನುವುದು ನನ್ನ ಅಭಿಪ್ರಾಯ. ಅಭಿವೃದ್ಧಿ ಮತ್ತು ಅನಭಿವೃದ್ಧಿ ಕಾರ್ಯಗಳಿಗೆ ಬರಬೇಕಾದಂಥ ಹಣ ಜಿಲ್ಲಾ ಪರಿಷತ್ತುಗಳಿಗೆ ಬರುತ್ತದೆ. ಇನ್ನು ಮಂಡಲ್ ಪಂಚಾಯತಿಗೆ ಹೆಚ್ಚು ಅಧಿಕಾರವನ್ನು ಕೊಟ್ಟಿದ್ದಾರೆ. ಪಶುಸಂಗೋಪನೆ, ಮತ್ತು ಕೃಷಿ ಇವುಗಳನ್ನು ಅಧಿಕಗೊಳಿಸುವುದಕ್ಕೆ, ಇವುಗಳ ಬಗ್ಗೆ ಯೋಜನೆಗಳನ್ನು ರೂಪಿಸತಕ್ಕ ಅಧಿಕಾರವನ್ನು ಮಂಡಲ್ ಪಂಚಾಯತಿಗೆ ಕೊಟ್ಟಿದ್ದಾರೆ. ಪ್ರತಿಯೊಬ್ಬನಿಗೂ ಐದು ರೂಪಾಯಿ ಆದಾಯ ಬರತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. 15,000 ಜನಸಂಖ್ಯೆ ಇರತಕ್ಕ ಮಂಡಲ್ ಪಂಚಾಯತಿಗೆ ಐದು ಕೋಟಿ ರೂಪಾಯಿಗಳ ಅನುದಾನ ಕೊಡಬೇಕೆಂದು ನಾನು ಸವಾಲ್ ಮಾಡುತ್ತೇನೆ. ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟಂತೆ ನೌಕರರುಗಳನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಅವರಿಗೆ ಸಂಬಳ ಸಾರಿಗೆಗಳನ್ನು

ಕೊಡಬೇಕಾಗುತ್ತದೆ. ಇದಕ್ಕೆಲ್ಲಾ ಹಣದ ಅವಶ್ಯಕತೆ ಇದೆ. ಈ ಮಸೂದೆಯಲ್ಲಿ ತೆರಿಗೆ ವಸೂಲ್ಮಾಡತಕ್ಕಂಥ ಅಧಿಕಾರವನ್ನೂ ಕೂಡಾ ಕೊಟ್ಟಿದ್ದಾರೆ. ಹಳ್ಳಿಗಳಲ್ಲಿ ಎಷ್ಟು ಪ್ರಮಾಣದಲ್ಲಿ ತೆರಿಗೆ ವಸೂಲ್ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಈಗಾಗಲೇ ತೆರಿಗೆಯ ಭಾರದಿಂದ ಜನರು ನರಳುತ್ತಿದ್ದಾರೆ. ತೆರಿಗೆಯಿಂದ ಸಂಪನ್ಮೂಲಗಳನ್ನು ರೂಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ತಾವು ಐದು ರೂಪಾಯಿ ತಲಾ ಖರ್ಚು ಮಾಡುತ್ತೇವೆಂದು ಏನು ಹೇಳಿದ್ದೀರಿ ಅದನ್ನು ಹತ್ತು ರೂಪಾಯಿಗೆ ಏರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ಮೂಲ ಉದ್ದೇಶ ವಿಕೇಂದ್ರೀಕರಣದ ಮೂಲ ಉದ್ದೇಶ ಸಾರ್ಥಕವಾಗಿ ಸ್ವಯಂಪರಿಪೂರ್ಣತೆಯನ್ನು ಸಾಧಿಸಿದಂತಾಗುತ್ತದೆ. ಸ್ವಯಂ ಅಧಿಕಾರವನ್ನು ಇಟ್ಟುಕೊಳ್ಳಬೇಕೆನ್ನುವ ಉದ್ದೇಶದಿಂದ ಈ ಮಸೂದೆಯನ್ನು ಜಾರಿಗೆ ತರುವಾಗ ಅದು ಫಲಕಾರಿಯಾಗಬೇಕಾದರೆ, ಸಫಲವಾಗಬೇಕಾದರೆ ಆ ದಿಕ್ಕಿನಲ್ಲಿ ರಾಜ್ಯಸರ್ಕಾರ ಯೋಚನೆ ಮಾಡಿ ಹತ್ತು ರೂಪಾಯಿ ಖರ್ಚುಮಾಡುವುದಕ್ಕೆ ಅನುಕೂಲವಾಗುವಂಥ ತಿದ್ದುಪಡಿ ತರಬೇಕೆಂದು ಸೂಚನೆ ತರಲಿಕ್ಕೆ ಇಚ್ಛೆಪಡುತ್ತೇನೆ. ಜಿಲ್ಲಾ ಪರಿಷತ್ತಿನ ಚುನಾವಣೆಗಳು ಮತ್ತು ಮಂಡಲ್ ಪಂಚಾಯತಿಯ ಚುನಾವಣೆಗಳು ನೇರವಾಗಿ ಆಗಬೇಕು.

ಇವತ್ತು ಸಾಮಾಜಿಕ ನ್ಯಾಯಾಲಯದ ಮಾತನ್ನು ಹೇಳುತ್ತಿದ್ದೇನೆ. ಕೇವಲ ಚುನಾವಣೆಗಳನ್ನು ನಡೆಸುವುದರ ಮೂಲಕ ನಾವು ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಜನರು ಅಭಿವೃದ್ಧಿ ಕೆಲಸಗಳಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಬೇಕು. ಅವರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಎಲ್ಲಿಯವರೆಗೆ ಅವಕಾಶ ಇಲ್ಲವೋ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಶಾಶ್ವತವಾಗಿ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯವನ್ನು ಎಲ್ಲಾ ವರ್ಗದವರಿಗೆ ದೊರಕಿಸಿ ಕೊಡಬೇಕಾಗಿದೆ. ಶ್ರೀ ವೈ. ರಾಮಕೃಷ್ಣರವರು ಹೇಳುತ್ತಿದ್ದರು ನಮ್ಮ ದೇಶದಲ್ಲಿ ಜಾತೀಯತೆ ಬಲಾಢ್ಯವಾಗಿ ಬೆಳೆದು ನಿಂತಿದೆ ಎಂದು ಈ ಜಾತೀಯತೆಯಿಂದ ದುರ್ಬಲವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ಈ ಮಸೂದೆಯ ಮೂಲಕ ದೊರಕುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥಾ ಮಾತನ್ನು ಹೇಳಿದ್ದಾರೆ. ಅದಕ್ಕೆ ಯಾವುದೇ ಮುಖ್ಯವಾದ ಸೂಚನೆಯನ್ನು ಕೊಡಲಿಲ್ಲ. ಯಾವ ರೀತಿಯಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸಬಹುದು, ಯಾವರೀತಿಯ ವ್ಯವಸ್ಥೆ ಮಾಡಬೇಕು ಎಂದು ಹೇಳತಕ್ಕದ್ದು ಅವರ ಕೈಯಲಾಗಲಿಲ್ಲ. ಹಿಂದುಳಿದ ಜನಾಂಗವೆನಿಸಿದೆ ಅದರಲ್ಲಿ ಮಹಿಳೆಯರೂ ಇದ್ದಾರೆ. ಲೋಹಿಯಾ ಅವರು ಏನು ಹೇಳಿದ್ದಾರೆ ಎಂದರೆ ಮಹಿಳೆಯವರುಕೂಡ ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ ಎಂದು ಆದುದರಿಂದ ಅವರಿಗೆ ಒಂದು ಮೀಸಲು ಸ್ಥಾನವನ್ನು ಮತ್ತು ಪ್ರಾತಿನಿಧ್ಯವನ್ನು ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಇವತ್ತು ನಾವು ಈ ಮಸೂದೆಯ ಮೂಲಕ ಮಂಡಲ್ ಪಂಚಾಯಿತಿಯಲ್ಲಿ ಒಟ್ಟು 20 ಜನರಿದ್ದಾರೆ ಅದರಲ್ಲಿ 25 ಭಾಗದಷ್ಟು ಮಹಿಳೆಯರಿಗೆ ಪ್ರಾತಿನಿಧ್ಯ ಕೊಡುವುದರ ಮೂಲಕ ಕ್ರಾಂತಿಕಾರಕವಾದ ಹೆಜ್ಜೆಯನ್ನು ಇಟ್ಟಿದ್ದೇವೆ ಇದರಿಂದ ಸಾಮಾಜಿಕ ನ್ಯಾಯವನ್ನು ದೊರಕಿಸತಕ್ಕ ಮಸೂದೆ ಇದಾಗಿದೆ ಎನ್ನತಕ್ಕಂಥಾ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ಈ ಒಂದು ಪ್ರಮುಖವಾದ ಹೆಜ್ಜೆಯನ್ನು ಏನು ಇಟ್ಟಿದ್ದೇವೆ, ಬಹುಶ: ಅದನ್ನು ತುಂಬು ಹೃದಯದಿಂದ ಸ್ವಾಗತಿಸಬೇಕು ಎನ್ನತಕ್ಕಂಥಾ ಮಾತನ್ನು ಹೇಳುತ್ತೇನೆ. ನಾನು ಇದರ ಬಗ್ಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ ಅದೇನೆಂದರೆ ನಮ್ಮಲ್ಲಿ 100ಕ್ಕೆ 25 ರಷ್ಟು ಮೀಸಲು ಸ್ಥಾನವನ್ನು ಏನು ಇಟ್ಟಿದ್ದೇವೆ ಅದು ಬಹುಶ ಯಾವ ವರ್ಗದ ಜನರು ಬಲಾಢ್ಯರಾಗಿದ್ದಾರೆ ಮುಂದುವರಿದ ಯಾವ ಜನರಿದ್ದಾರೆ, ಆ ವರ್ಗದ ಮಹಿಳೆಯರಿಗೆ ಇದು ಹೋಗತಕ್ಕ ವ್ಯವಸ್ಥೆ ಇರುವುದರಿಂದ ಇಲ್ಲಿಯೂಕೂಡ ಹಿಂದುಳಿದ ವರ್ಗದ ಮಹಿಳೆಯರು ಯಾರಿದ್ದಾರೆ, ದಲಿತ ವರ್ಗದ ಮಹಿಳೆಯರು ಯಾರಿದ್ದಾರೆ ಅವರಿಗೆ ಮೀಸಲು ಸ್ಥಾನ ಕೊಡತಕ್ಕದ್ದು ಪ್ರಾತಿನಿಧ್ಯ ಕೊಡತಕ್ಕದ್ದು ಅತ್ಯಂತ ಸೂಕ್ತವಾದುದು. ಈ ಮೂಲಕ ನಮ್ಮ ಮಹಿಳೆಯರಿಗೆ ಸಾಮಾಜಿಕ ನ್ಯಾಯ ಕೊಟ್ಟಂತೆ ಆಗುತ್ತದೆಂದು ಹೇಳಬಯಸುತ್ತೇನೆ. ಆದುದರಿಂದ ಈ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕೆಂದು ಈ ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಂಡಲ್ ಪಂಚಾಯತ್‌ನಲ್ಲಿ ಹಿಂದುಳಿದ ವರ್ಗದವರಿಗೆ ಎರಡು ಸ್ಥಾನಗಳನ್ನು ನಾಮಕರಣ ಮಾಡಲು ಮೀಸಲಿಡಲಾಗಿದೆ. ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುವುದೇನೆಂದರೆ, ಈ ಹಿಂದುಳಿದ ವರ್ಗದ ಜನರಿಗೆ ಮೀಸಲು ಇರತಕ್ಕದ್ದು ಅತ್ಯಂತಸೂಕ್ತ ಎನ್ನತಕ್ಕ ಮಾತನ್ನು ಹೇಳುತ್ತಾ, ಆ ವರ್ಗದ ಜನರನ್ನು ಗುರುತಿಸಿ ಆ ವರ್ಗದ ಜನರಿಗೆ ಮೀಸಲಾತಿಯನ್ನು ಕೊಟ್ಟರೆ ನಮ್ಮ ದೇಶದಲ್ಲೂ ಕೂಡ ಪ್ರಗತಿದಾಯಕವಾದ ಹೆಜ್ಜೆಯನ್ನು ಇಟ್ಟಂತೆ ಆಗುತ್ತದೆ. ಅಂಥವರಿಗೆ ಈ ಮೀಸಲಾತಿಯನ್ನು ಇಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಮಾತ್ರ ಹಿಂದುಳಿದ ವರ್ಗದವರಿಗೆ ನಾವು ನಾಮಕರಣ ಮಾಡುತ್ತೇವೆ, ಅಥವಾ ಮೀಸಲಾತಿಯನ್ನು ಇಡುತ್ತೇವೆ ಎನ್ನತಕ್ಕ

ವಾದದ ಅಂಶ ಸರಿಯಲ್ಲ. ಆದುದರಿಂದ ಒಂದು ಕಡೆ ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆ ಕೆಳಮಟ್ಟದಲ್ಲಿ ಆ ವರ್ಗದವರಿಗೆ ನಾಯಕತ್ವ ಬೆಳೆಸುತ್ತೇವೆಂದು ಒಂದು ಕಡೆ ಹೇಳಿ. ಅವರಿಗೆ ನಾಯಕತ್ವ ಕೊಡುವುದಕ್ಕೆ ತಯಾರಾಗಿಲ್ಲ ಎನ್ನತಕ್ಕ ಮಾತು ಹೇಳಿದರೆ ಅದು ಅಷ್ಟು ಸಾಧುವಾದುದಲ್ಲ. ಜಿಲ್ಲಾ ಪರಿಷತ್‌ನಲ್ಲೂ ಕೂಡ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯವನ್ನು ಕೊಡತಕ್ಕದ್ದು ಸೂಕ್ತ. ಎಲ್ಲಾ ಮಟ್ಟದಲ್ಲೂ ನಾಯಕತ್ವ ಬೆಳೆಯಬೇಕು. ಪ್ರತಿಯೊಂದು ಮಟ್ಟದಲ್ಲೂ ಆ ಜನರಿಗೆ ನಾಯಕತ್ವವನ್ನು ಕೊಟ್ಟರೆ ಆಗ ನಾವು ಎಲ್ಲರಿಗೂ ಸಾಮಾಜಿಕ ನ್ಯಾಯವನ್ನು ಕೊಟ್ಟಂತೆ ಆಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಈ ಮಸೂದೆಯ ಮೂಲಕ ನಾವು ಗ್ರಾಮ ಸಭೆಗಳನ್ನು ಮಾಡಿದ್ದೇವೆ. ಬಹುಶಃ ಹಿಂದೆ ಯಾವುದೇ ಮಸೂದೆಯಲ್ಲಿ ಈ ಒಂದು ಗ್ರಾಮಸಭೆಗಳನ್ನು ನಿರ್ಮಾಣ ಮಾಡತಕ್ಕ ಅಂಶಗಳನ್ನು ಸೇರಿಸಿರಲಿಲ್ಲ ಅದನ್ನು ಇವತ್ತು ನಾವು ಮಾಡಿದ್ದೇವೆ. ಇವತ್ತು ಅದಕ್ಕೆ ಪ್ರತಿಯೊಬ್ಬ ವಯಸ್ಕನು ಮತದಾನದ ಹಕ್ಕನ್ನು ಪಡೆಯುತ್ತಾನೆ. ಅವನು ಗ್ರಾಮಸಭೆಗಳಲ್ಲಿ ಸದಸ್ಯನಾಗಿ ಅಥವಾ ಮಂಡಲ್ ಪಂಚಾಯತ್‌ನಲ್ಲಿ ಏನೇನು ಕಾರ್ಯಕ್ರಮಗಳನ್ನು ಮಾಡಬೇಕು ಅದನ್ನೆಲ್ಲಾ ಪರಿಶೀಲನೆ ಮಾಡತಕ್ಕಂಥಾ ಅವಕಾಶವನ್ನು ನಾವು ಕಲ್ಪಿಸಿದ್ದೇವೆ. ಇಷ್ಟು ಮಾತ್ರವಲ್ಲ ಅವನು ಈ ಒಂದು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿರತಕ್ಕದ್ದು ಅತ್ಯಂತ ಸೂಕ್ತನೆಂದು ಹೇಳುತ್ತೇನೆ. ಒಂದು ಮಾತನ್ನು ಶ್ರೀ ವೈ. ರಾಮಕೃಷ್ಣ ಅವರು ಹೇಳಿದರು. ಇವತ್ತು ಕಾಲ ಪಕ್ವವಾಗಿಲ್ಲ, ಜನರು ಇನ್ನು ಬುದ್ಧಿವಂತರಾಗಿಲ್ಲ, ಇಷ್ಟೆಲ್ಲಾ ಕಾನೂನುಗಳನ್ನು ಪುಸ್ತಕದಲ್ಲಿ ಬರೆದುಬಿಟ್ಟರೆ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬಹುಶ; 25 ವರ್ಷಗಳಿಂದಲೂ ಕೂಡ ಈ ದೇಶದ ಅಧಿಕಾರವನ್ನು ರಾಜಕಾರಣಿಗಳು ತಮ್ಮ ಕೈಯ್ಯಲ್ಲಿ ಹಿಡಿದಿಟ್ಟುಕೊಂಡು ಹುಲುಮಾನವರು ಇವರು, ಇವರು ತಮ್ಮನ್ನು ತಾವೇ ರೂಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಇವರು ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನರ್ಹರು ಎನ್ನುವಂಥಾ ಏಕೈಕ ಕಾರಣಗಳಿಂದ ಈವತ್ತಿಗೂ ವಿಕೇಂದ್ರೀಕರಣವಾಗಿರಲಿಲ್ಲ. ಡಾ|| ಲೋಹಿಯಾ ಅವರು ಹೇಳಿದಂಥ ಚೌಕಟ್ಟಿನಲ್ಲಿ ಈ ವ್ಯವಸ್ಥೆಯನ್ನು ಮಾಡಿದ್ದೇವೆ. ಮಹಾತ್ಮ ಗಾಂಧೀಜಿಯವರು ರಾಮರಾಜ್ಯವಾಗಬೇಕು, ರೈತರ ರಾಜ್ಯ ಆಗಬೇಕು, ರೈತರಿಗೆ ಅಧಿಕಾರ ಸಿಕ್ಕಬೇಕೆಂದು ಏನು ಹೇಳಿದ್ದರೋ ಅದನ್ನು ಇವರು ಮರೆತು ಅಧಿಕಾರಕ್ಕೆ ಬಂದಮೇಲೆ ರಾಜಕಾರಣಿಗಳು ಹೇಳುತ್ತಾರೆ ಹಳ್ಳಿಗಾಡಿನ ಜನರು ಬುದ್ಧಿವಂತರಲ್ಲ ಅವರನ್ನು ಅವರು ಆಳಿಕೊಳ್ಳುವುದಕ್ಕೆ ಅಸಮರ್ಥರಾಗಿದ್ದಾರೆ ಎನ್ನತಕ್ಕಂಥಾ ಮಾತನ್ನು ಹೇಳಿ, ಇಲ್ಲಿಯವರೆಗೂ ಅವರಿಗೆ ಸಿಗಬೇಕಾದ ನ್ಯಾಯವನ್ನು ಅವರಿಗೆ ದೊರಕಿಸಿಕೊಡಲಿಲ್ಲ. ಬ್ರಿಟಿಷರು ಮತ್ತು ಚರ್ಚಿಲ್‌ರವರು ಏನು ಹೇಳುತ್ತಿದ್ದರು ಎಂದರೆ ಭಾರತೀಯರು ಹುಲುಮಾನವರು ಅಂಥಹವರಿಗೆ ಅಧಿಕಾರವನ್ನು ಕೊಟ್ಟರೆ ಅವರು ಅಧಿಕಾರವನ್ನು ನಡೆಸಲಿಕ್ಕೆ ಅನರ್ಹರು ಎನ್ನತಕ್ಕ ಮಾತನ್ನು ಹೇಳಿದರು. ಅವರು ಬಿಟ್ಟುಹೋದ ಅಧಿಕಾರವನ್ನು ಕೇಂದ್ರದ ನಾಯಕತ್ವ ವಹಿಸಿಕೊಂಡ ಮೇಲೆ ಈ ರಾಜಕಾರಣಿಗಳು ಕೂಡ ಅವರು ಹೇಳಿದ್ದನ್ನೇ ಪ್ರತಿಪಾದನೆ ಮಾಡುತ್ತಾ, ಹಳ್ಳಿಗಾಡಿನಲ್ಲಿ ಇರತಕ್ಕ ಜನರಿಗೆ ಅವಿದ್ಯಾವಂತರು, ವಿದ್ಯಾಭ್ಯಾಸವಿಲ್ಲ, ಓದುಬರಹ ಬರುವುದಿಲ್ಲ, ಅನಕ್ಷರಸ್ಥರು, ಇವರಿಗೆ ಅನುಭವ ಇಲ್ಲ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಅನರ್ಹರು ಎಂದು ಹೇಳುತ್ತಾ ವಿಕೇಂದ್ರೀಕರಣವನ್ನು ತರುವುದರಲ್ಲಿ ಅವರು ವಿಫಲರಾಗಿದ್ದಾರೆ. ಇವತ್ತು ಶ್ರೀ ರಾಮಕೃಷ್ಣರವರು ವಕೀಲರಾಗಿದ್ದಾರೆ, ಅವರು ರಾಜ್ಯಾಂಗದತ್ತ ಕೇಂದ್ರ ಮತ್ತು ರಾಜ್ಯಗಳ ನಡುವಿನ ಆಡಳಿತವನ್ನು ವಿಶ್ಲೇಷಣೆ ಮಾಡುತ್ತಾ ಹೇಳಿದರು, ನಾವು ಇವತ್ತು ಎಷ್ಟೇ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂಬ ಆಶೆ ಆಕಾಂಕ್ಷೆಗಳು ಇದ್ದರೂ ಕೂಡ ಆಡಳಿತಾಂಗದ ಮೂರೂ ಮುಖಗಳೂ ಭಾಗವಹಿಸುವಂತೆ ಮಾಡುವ ಬಗ್ಗೆ ಆಕಾಂಕ್ಷೆ ಇದ್ದರೂ ಕೂಡ ಅದಕ್ಕೆ ರಾಜ್ಯಾಂಗದ ನಿರ್ಬಂಧ ಇದೆ ಎಂದು ಶ್ರೀ ವೈ. ರಾಮಕೃಷ್ಣ ಅವರು ಹೇಳಿದಹಾಗೆ ಕಾಣುತ್ತದೆ

12-00 Noon

ಶ್ರೀ ವೈ. ರಾಮಕೃಷ್ಣ.- ನಾನು ಮಂಡಲ್ ಪಂಚಾಯಿತಿ ಜೊತೆಯಲ್ಲಿ ಇದನ್ನು ತರಬಾರದು ಎಂದು ಹೇಳಿದ್ದಾ ಅಥವಾ ಜಿಲ್ಲಾ ಪರಿಷತ್ತನ್ನು ತರಬಾರದು ಎಂದು ಹೇಳಿದ್ದಾ ? ನಾನು ಹೇಳಿದ್ದು ಏನೆಂದರೆ, ನ್ಯಾಯಪಂಚಾಯಿತಿ ತರುವುದಕ್ಕೆ ಕಾಲ ಪಕ್ವವಾಗಿಲ್ಲ ಎಂದು ಜಿಲ್ಲಾ ಪರಿಷತ್ ಬಗ್ಗೆ ಹೇಳಲಿಲ್ಲ. ತಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ.—ಮಾನ್ಯ ರಾಮಕೃಷ್ಣರವರು ಈಗ ತಂದಿರತಕ್ಕ ಮಸೂದೆಯನ್ನು ಸ್ವಾಗತಿಸಿದರೆ ನಮಗೆ ಬಹಳ ಸಂತೋಷ. ಅವರು ಹೇಳಿದಂಥ ಹಿನ್ನೆಲೆಯಲ್ಲಿ ಎಲ್ಲಾ ಅಂಕ ಅಂಶಗಳನ್ನು ಕೊಟ್ಟರು. ನಮ್ಮಲ್ಲಿ ಮಹಿಳೆಯರಿಗೆ, ಗಂಡಸರಿಗೆ, ದಲಿತರಿಗೆ ಇಷ್ಟಿಷ್ಟು ಎಂದು

ಅಂಕಿಅಂಶಗಳನ್ನು ಕೊಟ್ಟರು. ಜಾತಿ ವ್ಯವಸ್ಥೆಯ ಬಗ್ಗೆ ಅಂಕಿಅಂಶಗಳನ್ನು ಕೊಟ್ಟರು ಈಗ ಅವರ ಭವಿಷ್ಯವನ್ನು ರೂಪಿಸಿಕೊಳ್ಳಲಿಕ್ಕೆ ಕಾಲಪಕ್ವವಾಗಿಲ್ಲ ಎಂದು ಹೇಳಿದರು. ಆಡಳಿತದ ಮೂರು ಮುಖಗಳಾದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳಲ್ಲಿ ಅವರು ಸಂಪೂರ್ಣವಾಗಿ ಭಾಗಿಯಾಗತಕ್ಕ ಶಕ್ತಿ ಪಡೆದುಕೊಂಡಿಲ್ಲ ಅದನ್ನು ನೀವು ಮಾಡಲಿಕ್ಕೆ ಈ ಪರಿಸ್ಥಿತಿಯಲ್ಲಿ ಶಕ್ಯವಿಲ್ಲ ಎಂದು ಹೇಳಿದರು. ನನ್ನ ಅಭಿಪ್ರಾಯವಾದರೂ ಇಷ್ಟೆ. ಈ ದೇಶದಲ್ಲಿ ಯಾವ ಒಂದು ಜಾತಿಯ ವ್ಯವಸ್ಥೆಯನ್ನು ಮಾಡಿದ್ದೇವೆ. ಇದರಲ್ಲಿ ರತಕ್ಕಂಥ ವ್ಯವಸ್ಥೆಯಲ್ಲಿ ನಾವು ಜನರನ್ನು ಪ್ರಜಾವಂತರನ್ನಾಗಿ ಮಾಡದೆ, ಅವರಿಗೆ ಆದ ಅನ್ಯಾಯವನ್ನು ಪ್ರತಿಭಟನೆ ಮಾಡುವುದಕ್ಕೆ ಅವಕಾಶ ಕಲ್ಪಿಸದೇ ಹೋದರೆ ಎಲ್ಲಿಯವರೆಗೆ ಬದಲಾವಣೆ ತರಲಿಕ್ಕೆ ಸಾಧ್ಯವಾಗುತ್ತದೆ ಶೋಷಿತವರ್ಗದ ಜನರಿಗೆ ಅವಕಾಶವನ್ನೇ ಕಲ್ಪಿಸದೆ. ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಅವಕಾಶ ಕಲ್ಪಿಸದೆ, ನ್ಯಾಯವಿತರಣೆಯಲ್ಲಿ ಅವಕಾಶ ಕಲ್ಪಿಸದೇ ಇದ್ದರೆ ಅವರು ಯಾವಾಗ ಶಕ್ತಿ ಪಡೆಯುತ್ತಾರೆ ಎಂದು ಕೇಳಬೇಕಾಗುತ್ತದೆ. ಅದಕ್ಕೆ ಅವಕಾಶ ಕಲ್ಪಿಸಿಕೊಡತಕ್ಕದ್ದು ಈ ಮಸೂದೆ. ಒಂದು ಸಾವಿರ ವರ್ಷವಾದರೂ ಜಾತಿ ವ್ಯವಸ್ಥೆಯನ್ನು ನಿರ್ಮೂಲ ಮಾಡಲಿಕ್ಕೆ ಸಾಧ್ಯವಿಲ್ಲ. ಇಂತಹ ಒಂದು ಜಾತಿಯ ವ್ಯವಸ್ಥೆಯಲ್ಲಿ, ಬಡವ ಮತ್ತು ಬಲ್ಲಿದರು ಇರತಕ್ಕ ಈ ಒಂದು ವ್ಯವಸ್ಥೆಯಲ್ಲಿ ದಲಿತರಿಗೆ, ಹಿಂದುಳಿದವರಿಗೆ ಮತ್ತು ಶೋಷಿತ ವರ್ಗಕ್ಕೆ ಅವಕಾಶ ಕಲ್ಪಿಸಿಕೊಡಲಾಗಿದೆ. ಅವರಿಗೆ ಅವಕಾಶ ಸಿಕ್ಕಿದಾಗ ನಾವು ಪ್ರತಿಭಟನೆ ಮಾಡುತ್ತೇವೆ, ನಮ್ಮ ನ್ಯಾಯಕ್ಕೆ ಹೋರಾಡುತ್ತೇವೆ, ನಮ್ಮ ಹಕ್ಕುಗಳಿಗೆ ಹೋರಾಟ ಮಾಡುತ್ತೇವೆ, ಎಂಬ ಒಂದು ಜ್ಞಾನ ಅವರಲ್ಲಿ ಬೆಳೆಯಬೇಕಾದರೆ ಇಂತಹ ಒಂದು ವ್ಯವಸ್ಥೆ ಅತ್ಯಗತ್ಯ ಎನ್ನುವುದು ನನ್ನ ಅಭಿಪ್ರಾಯ

Sri Y —Ramakrishna.-On page 197-Minutes of Dissent ನಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಸದಸ್ಯರು ಹೇಳಿದ್ದಾರೆ ಅದು ಈರೀತಿ ಇದೆ:-

"The present system of panchayatraj institutions in Karnataka State is based upon three tier system with real power being at village and taluk (block) levels having democratically elected bodies on the basis of adult franchise" ಎಂದು ಮಾನ್ಯ ಸದಸ್ಯರು ಇದನ್ನು ಓದಿದಹಾಗೆ ಕಾಣುವುದಿಲ್ಲ. ಮತ್ತೊಂದು ವಿಷಯ ಏನೆಂದರೆ.

"It is unthinkable that a person belonging to Sc/St and minorities is elected as Chairman of the Mandal Panchayat and consequently the Taluk Panchayat Committee will be flooded the people belonging to powerful classes."

ಈ ವಾದವೂ ಇದೆ. ಈಗಿನ ಸಿಸ್ಟಂ ಪ್ರಕಾರ ಅವರಿಗೆ ಈ ಅವಕಾಶ ಸಿಗುತ್ತಿದೆ ಪಾಪುಲೇಷನ್ ಫಿಗರ್ ಜಾಸ್ತಿ ಮಾಡಿದರೆ ಎಲ್ಲಿ ಸಿಗುತ್ತದೆ. 197ನೇ ಪೇಜಿನಲ್ಲಿ ಅವರೇ ಹೇಳಿದ್ದಾರೆ, ಅದಕ್ಕೆ ಕಾಂಟ್ರರಿಯಾಗಿ ತಾವು ಹೇಳುತ್ತಿದ್ದೀರಿ.

ಶ್ರೀ ಜೆ. ಎ ಜೀವಿಜಯ.-ಮಾನ್ಯ ಸಿದ್ದರಾಮಯ್ಯನವರ ವಿಚಾರಧಾರೆ ಹೊಳೆಯ ರೂಪದಲ್ಲಿ ಹರಿದು ಬರುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ -ಅದನ್ನು ನಾನು ಓದಿದ್ದೇನೆ ಸ್ವಾಮಿ.

ಉಪಾಧ್ಯಕ್ಷರು -ಅದಕ್ಕೋಸ್ಕರವೇ ಲೋಟದಲ್ಲಿ ನಾನೇ ನೀರು ತರಿಸಿ ಅವರ ಬಳಿ ಇಡಿಸಿದ್ದೇನೆ.

ಶ್ರೀ ದೊಡ್ಡ ಬೋರೇಗೌಡ.-ಹಿರಿಯ ಸದಸ್ಯರಾದ ಮಾನ್ಯ ರಾಮಕೃಷ್ಣರವರು ಅನೇಕ ವರ್ಷಗಳ ಕಾಲ ಈ ರಾಜ್ಯದಲ್ಲಿ ಮಂತ್ರಿಗಳಾಗಿದ್ದರು, ಶ್ರೀಕಂಠಯ್ಯನವರೂ ಆಗಿದ್ದರು. ಮಾನ್ಯ ಮಂಜೇಗೌಡರು ಹಾಗೂ ಮಾನ್ಯ ಚೌಡಯ್ಯನವರೂ ಸಹ ಬಹಳ ವರ್ಷಗಳಿಂದ ಈ ಸದನದಲ್ಲಿದ್ದಾರೆ ಇವರೆಲ್ಲರೂ ಈಗ ದಲಿತರ ಬಗ್ಗೆ, ಹರಿಜನ-ಗಿರಿಜನರ ಬಗ್ಗೆ ಏನು ಕಳವಳವನ್ನು ವ್ಯಕ್ತಪಡಿಸಿದ್ದಾರೆ ಈ ಬಗ್ಗೆ 36 ವರ್ಷಗಳಲ್ಲಿ ಇವರ ಹೃದಯ ಮಿಡಿದಿಲ್ಲ ಕೆರೆಯ ನೀರನ್ನು ತೋರಿಸಿದರೇ ಹೊರತು ಕೆರೆಯ ಹತ್ತಿರ ತೆಗೆದುಕೊಂಡು ಹೋಗಿ ಕುಡಿಸಲಿಲ್ಲ ಓಟಿಗೋಸ್ಕರ ಜಾತಿಮತಗಳನ್ನು ಕಟ್ಟಿದರೇ ಹೊರತು ಅದನ್ನು ನಿರ್ಮೂಲ ಮಾಡುವುದಕ್ಕೆ ಯಾವ ಪ್ರಯತ್ನ ಮಾಡಲಿಲ್ಲ. ಈಗಲೂ ನೀವು ಆ ವರ್ಗದವರ ಬಗ್ಗೆ, ಹಿಂದುಳಿದ ಜನರ ಬಗ್ಗೆ ಗ್ರಾಮೀಣ ಕೃಷಿಕರ ಬಗ್ಗೆ ನಿಜವಾದ ಅನುಕಂಪವುಳ್ಳವರಾಗಿದ್ದರೆ ಈ ಮಸೂದೆಯನ್ನು ಮುಕ್ತಕಂಠದಿಂದ ನೀವು ಒಪ್ಪಿಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೆ, ಈಗ ನಾವು ಸಾಮಾಜಿಕನ್ಯಾಯ ಎಂದು ಹೇಳುವಾಗ, ಮತ್ತೆ ಎಲ್ಲಾ ವರ್ಗದ ಜನರಿಗೂ ನ್ಯಾಯವನ್ನು ಕೊಡಬೇಕು, ಅವರೂ ಪಾಲುದಾರರು ಆಗಬೇಕು ಎಂಬ ಮೂಲಭೂತ ತತ್ವವನ್ನು ಒಪ್ಪಿಕೊಂಡಾಗ ಮಾನ್ಯ ರಾಮಕೃಷ್ಣರವರು ಅದಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದಾರೆ. ಇಲ್ಲಿಯವರೆಗೂ ಮಹಿಳೆಯರು, ಅತ್ಯಂತ ಹಿಂದುಳಿದ ವರ್ಗದವರು ಎಂದು ಒಪ್ಪಿಕೊಂಡು ಅವರಿಗೆ ಯಾವುದೇ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಭಾಗವಹಿಸತಕ್ಕ ಪ್ರಾತಿನಿಧ್ಯ ಕೊಟ್ಟಿಲ್ಲ ಎನ್ನುವುದು ನಿರ್ವಿವಾದವಾದ ಅಂಶ. ಮತ್ತೆ ಹಿಂದುಳಿದ ಜನರಿಗೆ ಅದರಲ್ಲಿ ಭಾಗವಹಿಸತಕ್ಕ ಅವಕಾಶವಿಲ್ಲ ಎನ್ನುವುದು ನಿರ್ವಿವಾದವಾದ ಅಂಶ ಆದರೆ ಇದರಲ್ಲಿ ಹರಿಜನರು, ಹಿಂದುಳಿದವರು ಭಾಗವಹಿಸಬೇಕು ಎಂದು ಆ ವರ್ಗ ಗಿರಿಜನರುಗಳಿಗೆ ಅವಕಾಶವನ್ನು ಮಾಡಿಕೊಡತಕ್ಕ ಅಂಶಗಳಿವೆ. ಮಹಿಳೆಯರಿಗೆ 25 ಭಾಗ ಕೊಡಬೇಕು. ಹರಿಜನ ಗಿರಿಜನರಿಗೆ ಅವಕಾಶ ಇರಬೇಕು. ಹಿಂದುಳಿದ ವರ್ಗದ ಜನರಿಗೆ ಅವಕಾಶ ಇರಬೇಕು ಎಂದು ಹೇಳಿದ್ದಾರೆ ಈ ಜನರು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಭಾಗವಹಿಸಿದಾಗ ಅವರ ಮೇಲೆ ದಬ್ಬಾಳಿಕೆ ಆಗುತ್ತಿದೆ ಎನ್ನುವುದನ್ನು ಅರಿವು ಮಾಡಿಕೊಂಡಾಗ ನಮಗೆ ಏನು ಆಗುತ್ತಿದೆ ಎಂದು ತಿಳಿದುಕೊಳ್ಳಲಿಕ್ಕೆ ಇದರಿಂದ ಅವಕಾಶವಾದರೂ ದೊರಕುತ್ತದೆ. ಮತ್ತು ಅದನ್ನು ಪ್ರತಿಭಟನೆ ಮಾಡತಕ್ಕ ಶಕ್ತಿಯನ್ನು ಬೆಳೆಸಿಕೊಳ್ಳಲಿಕ್ಕೆ ಅವಕಾಶವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಈ ದಿಶೆಯಲ್ಲಿ ಇದೊಂದು ಮಹತ್ವಪೂರ್ಣವಾದ ಹೆಜ್ಜೆ ಎಂಬ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಇದರಿಂದ ಸಾಮಾಜಿಕ ಬದಲಾವಣೆ ತಂದುಬಿಡುತ್ತೇವೆ, ಅಸಮತೆಯನ್ನು ನಿವಾರಣೆ ಮಾಡಿಬಿಡುತ್ತೇವೆ ಎಂಬ ಭ್ರಮೆ ಇಲ್ಲ. ನಾವು ಕೊಟ್ಟ ವ್ಯವಸ್ಥೆಯಲ್ಲಿ ಅವರಿಗೆ ಪ್ರತಿಭಟನೆ ಮಾಡತಕ್ಕ ಅವಕಾಶ ಸಿಕ್ಕಿದಾಗ ಮುಂದೆಯಾದರೂ ಅದು ಫಲಕಾರಿಯಾದೀತು ಎನ್ನುವ ದಿಶೆಯಲ್ಲಿ ಈ ಒಂದು ಹೆಜ್ಜೆ ಇಟ್ಟಿದೆ ಎನ್ನುವುದು ನನ್ನ ಅಭಿಪ್ರಾಯ. ಈ ದಿಶೆಯಲ್ಲಿ ಮಹತ್ವಪೂರ್ಣವಾದಂಥ ಹೆಜ್ಜೆ ಅಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿ. ಆದರೆ ತಾಲ್ಲೂಕು ಮಟ್ಟದಲ್ಲಿ ಸಮಿತಿ ಏನಿದೆ ಅದನ್ನು ನಾನು ವೈಯುಕ್ತಿಕವಾಗಿ ಬೇಡ ಎಂದು ಹೇಳುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಇರತಕ್ಕ ಅಧಿಕಾರಗಳು ನೇರವಾಗಿ ಜಿಲ್ಲಾ ಪರಿಷತ್ತಿಗೆ ಮತ್ತು ಮಂಡಲ್ ಪಂಚಾಯಿತಿಗೆ ವರ್ಗಾವಣೆಯಾಗಿ ಜನರಿಗೆ ಹತ್ತಿರವಾಗಿ ಅಧಿಕಾರವನ್ನು ಕೊಟ್ಟಿರುವುದರಿಂದ ತಾಲ್ಲೂಕು ಮಟ್ಟದ ಸಮಿತಿಗಳ ಅಗತ್ಯವಿಲ್ಲ ಎಂದು ಹೇಳುತ್ತೇನೆ. ಇವತ್ತು ಪರಿವರ್ತನ ಕಾಲವಾದುದರಿಂದ ಈ ಎರಡಕ್ಕೂ ಒಂದು ಸೇತು ಬಂಧನ ಇರಲಿ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಇದರ ಅಗತ್ಯವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಕಾಲಕ್ರಮೇಣ ಅದನ್ನು ತೆಗೆದುಹಾಕುವುದು ಉಚಿತ ಎಂದು ನಾನು ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಇವೆಲ್ಲಾ ಮಾಡಿದರೂ ಕೂಡ ಹಣಕಾಸಿನ ವಿಚಾರದಲ್ಲಿ 5–10 ರೂಪಾಯಿ ಕೊಟ್ಟರೂ ಕೂಡ ಎಲ್ಲಾ ಸಂಪನ್ಮೂಲ ಬಂದು ಸೇರುತ್ತದೆ ಅಂದರೂ ಕೂಡ ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡಬೇಕಾದರೆ ಜಿಲ್ಲಾ ಮಟ್ಟದಲ್ಲಿ ಆಗತಕ್ಕ ಎಲ್ಲಾ ಉತ್ಪತ್ತಿ ಮತ್ತು ಉಳಿತಾಯ ಏನಿದೆ ಅದರಲ್ಲಿ ಹೆಚ್ಚು ಭಾಗ ಆ ಜಿಲ್ಲೆಯ ಅಭಿವೃದ್ಧಿಗೆ ಹೋಗುವ ಹಾಗೆ ಮಾಡಿದರೆ ಇನ್ನೂ ಹೆಚ್ಚು ಪ್ರಗತಿಯಾಗುತ್ತದೆಯೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ನೌಕರಶಾಹಿಯನ್ನು ತೆಗೆದುಹಾಕತಕ್ಕಂಥಾದ್ದು ಮುಖ್ಯ. ಹುಟ್ಟುವಳಿ ಮತ್ತು ಉಳಿತಾಯ ಎರಡೂ ಅಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಅಲ್ಲಿಗೇ ಹೋಗಬೇಕು ಎನ್ನುವುದು ನನ್ನ ಸಲಹೆ.

ನಾವು ಹೇಳತಕ್ಕ ವಿಚಾರಗಳು ಅವರಿಗೆ ಅಪಥ್ಯವಾಗಿ ಕಾಣುತ್ತವೆ. ಕೇಳುವುದಕ್ಕೆ ಅವರಿಗೆ ಸ್ವಲ್ಪ ತೊಂದರೆಯಾಗಬಹುದು. ಆದರೆ ಇಂತಹ ವಿಚಾರಗಳು ಯಾವಾಗಲೂ ಪ್ರಗತಿದಾಯಕವಾಗಿ ಇರುತ್ತವೆ. ಇಂತಹ ಪ್ರಗತಿದಾಯಕವಾಗಿ ಯೋಚನೆ ಮಾಡದೇ ಇರತಕ್ಕವರಿಗೆ ಇದು ಸ್ವಲ್ಪ ಅಪಥ್ಯವಾಗಿ ಕಾಣತಕ್ಕದ್ದು ಸಾಧ್ಯ. ಈ ದಿಸೆಯಲ್ಲಿ ನಾವು ನ್ಯಾಯ ಪಂಚಾಯತಿಗಳನ್ನು ಮಾಡುತ್ತಿದ್ದೇವೆ. ಇದು ತಾತ್ವಿಕವಾಗಿ ಕ್ರಾಂತಿಕಾರಕವಾದುದು ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಇವತ್ತು ನಮ್ಮ ದೇಶದಲ್ಲಿ ನ್ಯಾಯವನ್ನು ಜನತೆಗೆ ಅತ್ಯಂತ ಹತ್ತಿರದಲ್ಲೇ ಕೊಡಬೇಕೆಂದು ಇದರ ಮೂಲ ಉದ್ದೇಶ. ದುಬಾರಿಯಾಗದ ರೀತಿಯಲ್ಲಿ ಶೀಘ್ರವಾಗಿ ನ್ಯಾಯ ವಿತರಣೆಯಾಗುವುದಕ್ಕೆ ಇಲ್ಲಿ ಹೆಚ್ಚು ಅನುಕೂಲವನ್ನು ಕೊಡುವುದಕ್ಕಾಗುತ್ತದೆಂಬುದು ಇದರ ಮೂಲ ಉದ್ದೇಶ. ನ್ಯಾಯಾಲಯದಲ್ಲಿ ಎಷ್ಟೇ ವೆಚ್ಚ ಮಾಡಿದರೂ ಅಷ್ಟೇ ಅನ್ಯಾಯವಾಗುತ್ತಿದೆ ಎಂಬುದು ಸಾಮಾನ್ಯವಾಗಿ ಎಲ್ಲ ಜನರ ಅಭಿಪ್ರಾಯವಾಗಿದೆ. ಆ ದೃಷ್ಟಿಯಿಂದ ಹೆಚ್ಚು ದುಬಾರಿಯಾಗದ ರೀತಿಯಲ್ಲಿ ಅತ್ಯಂತ ಹತ್ತಿರದಲ್ಲಿ ನ್ಯಾಯವನ್ನು ವಿತರಣೆ ಮಾಡತಕ್ಕ ಒಂದು ಅವಕಾಶ ಇರಬೇಕೆಂಬ ಒಂದು ಮೂಲ ಉದ್ದೇಶದಿಂದ ಇದನ್ನು ತಂದಿದ್ದೇವೆ. ಆದರೆ ಇದಕ್ಕೆ ಕೆಲವು ಮಾನ್ಯ ಸದಸ್ಯರು ಇದಕ್ಕೆ ಕಾಲ ಇನ್ನೂ ಪಕ್ವವಾಗಿಲ್ಲ ಇದರಿಂದ ನ್ಯಾಯವನ್ನು ವಿತರಣೆ ಮಾಡುವುದಕ್ಕೆ ಆಗುವುದಿಲ್ಲ, ಎಂದಿದ್ದಾರೆ ಹಾಗೂ ಅವರಿಗೆ ಕಾನೂನಿನ ಜ್ಞಾನ ಇಲ್ಲ, ಆದ್ದರಿಂದ ಕಾನೂನಿನ ಜ್ಞಾನ ಇಲ್ಲದೆ ನ್ಯಾಯ

ವನ್ನು ವಿತರಣೆ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂತದ್ದನ್ನು ಹೇಳಿದ್ದಾರೆ. ಕಾನೂನಿಗಿಂತ ಒರಟು ಸತ್ಯವೇ ಅತ್ಯಂತ ಮೇಲು ಎಂಬುದು ನನ್ನ ವ್ಯಯಕ್ತಿಕ ಅಭಿಪ್ರಾಯ. ಏಕೆಂದರೆ ಹಳ್ಳಿಗಳಲ್ಲಿ ಒರಟು ಸತ್ಯದ ಮೂಲಕ ನ್ಯಾಯವನ್ನು ವಿತರಣೆ ಮಾಡಿರತಕ್ಕಂಹದನ್ನು ನಾವು ನೋಡಿದ್ದೇವೆ. ಈ ರೀತಿಯ ನ್ಯಾಯವನ್ನು ವಿತರಣೆ ಮಾಡತಕ್ಕಂತಹ ಯೋಜನೆಯನ್ನು ಜನರಿಗೆ ಕೊಡತಕ್ಕಂತಹದು ಹೊಸದೇನು ಅಲ್ಲ. ಅನೇಕ ವರ್ಷಗಳಿಂದ ಇದೊಂದು ಐತಿಹಾಸಿಕ ಹಿನ್ನಲೆಯನ್ನು ಹಾಗೂ ಬೆಂಬಲವನ್ನು ಪಡೆದಿದೆ. ಆದ್ದರಿಂದ ಇದು ಆಗಬೇಕು. ಆದರೆ ಇದನ್ನು ನಾವು ನೋಡಿದಾಗ ಒಂದು ಸಾವಿರದವರೆಗೆ ಹಣದ ಮೌಲ್ಯ ಇರತಕ್ಕಂತಹದ್ದನ್ನು ತೀರ್ಮಾನಮಾಡುವ ಅಧಿಕಾರ ಕೊಟ್ಟಿದ್ದಾರೆ. ಕ್ರಿಮಿನಲ್ ಮೊಕದ್ದಮೆಗಳು ಸಣ್ಣ ಪುಟ್ಟ ಜಗಳಗಳೇ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬರತಕ್ಕಂತಹದ್ದು. ನಮ್ಮ ಜಮೀನಿನಲ್ಲಿ ಮೇವು ಕೊಯ್ಯುವುದಕ್ಕೆ ಬಂದವನು ಮೆಣಸಿನಕಾಯಿ ಕುಯ್ಕೊಂಡು ಹೋದ ಎಂದೋ, ದನ ನುಗ್ಗಿಬಿಟ್ಟು, ಬೇಲಿಯನ್ನು ಮುರಿದುಹಾಕಿಬಿಟ್ಟಿದ್ದಾನೆ ಎಂದೋ ಸಣ್ಣ ಪುಟ್ಟ ಜಗಳಗಳು ಹಳ್ಳಿಗಳಲ್ಲಿ ಜಾಸ್ತಿ ಬರುತ್ತವೆ. ಇಂತಹ ವ್ಯವಹಾರಗಳಿಗೆ ಕೋರ್ಟಿಗೆ ಹೋಗಿ, ಪೋಲೀಸ್ ಸ್ಟೇಷನ್‌ಗೆ ಹೋಗಿ ಅಲ್ಲಿ ಅಲೆಯುವುದು, ಲಾಯರ್‌ಗಳನ್ನು ಇಟ್ಟುಕೊಂಡು ವ್ಯಾಜ್ಯವನ್ನು ಮಾಡುವುದಕ್ಕೆ ಬದಲಾಗಿ ಹಳ್ಳಿಗಳಲ್ಲೇ ಇಂತಹ ನ್ಯಾಯಗಳನ್ನು ಅತ್ಯಂತ ಮಹತ್ವಪೂರ್ಣವಾಗಿ ತೀರ್ಮಾನ ಮಾಡುವುದಕ್ಕಾಗುತ್ತದೆ ಎನ್ನತಕ್ಕಂತಹದು ನನ್ನ ಅಭಿಪ್ರಾಯ. ಇಂತಹ ಮೊಕದ್ದಮೆಗಳನ್ನು ನ್ಯಾಯಪಂಚಾಯಿತಿಗಳಿಗೆ ಕೊಟ್ಟಿರತಕ್ಕಂತಹದು ಒಳ್ಳೆಯದು. ಈ ನ್ಯಾಯ ಪಂಚಾಯಿತಿಗಳು ಇಂತಹ ಕೇಸುಗಳನ್ನು ತೀರ್ಮಾನ ಮಾಡುವುದರ ಜೊತೆಗೆ ತಪ್ಪಿತಸ್ಥನಿಗೆ 50 ರೂಪಾಯಿಗಳವರೆಗೆ ದಂಡವನ್ನು ಹಾಕತಕ್ಕಂತಹದ್ದು ಅಂತ ಇದೆ. ಇದನ್ನು ಸ್ಪಷ್ಟವಾಗಿ ಅರ್ಥವಾಗಲಿಲ್ಲ. ಡಿಕ್ರಿ ಮಾಡುತ್ತಾರೆ, ಆದರೆ ಅದನ್ನು ಜಾರಿಗೆ ಕೊಡತಕ್ಕಂತಹದ್ದು ಹೇಗೆ ಎಂಬುದು ಇದರಲ್ಲಿ ನಮೂದಾಗಿಲ್ಲ. ಒಂದು ಸಾವಿರ ರೂಪಾಯಿಗಳಿಗೆ ಡಿಕ್ರಿ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಅದನ್ನು ಕಾರ್ಯಸಾಧನೆ ಮಾಡತಕ್ಕಂತಹದ್ದು ಅಷ್ಟು ಸುಲಭ ಇಲ್ಲ, ಬಹಳ ಕಷ್ಟವಾಗುತ್ತದೆ. ನ್ಯಾಯಾಲಯಗಳಲ್ಲೂ ಕೂಡ ಇಂತಹದನ್ನು ವಸೂಲಿ ಮಾಡಬೇಕಾದರೆ ಬಹಳ ಕಷ್ಟವಾಗುತ್ತಿದೆ. ಎಲ್ಲಾ ವ್ಯವಸ್ಥೆಗಳಿದ್ದೂ ನ್ಯಾಯಾಲಯಗಳಿಗೆ ಕಷ್ಟವಾಗಿರುವಾಗ ನ್ಯಾಯ ಪಂಚಾಯತಿಗೆ ಇದನ್ನು ವಹಿಸಿರುವಂತಹದ್ದು ಸರಿಯಾದುದಲ್ಲ. ಇನ್ನು ನ್ಯಾಯ ಕೊಡುವ ವಿಚಾರದಲ್ಲಿ ಮೇಲ್ವರ್ಗದವರಿಗೆ ಅನುಕೂಲವಾಗಬಹುದು, ದುರ್ಬಲವರ್ಗದವರಿಗೆ ಹಾಗೂ ದಲಿತರಿಗೆ ತೊಂದರೆಯಾಗಬಹುದೆಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಅವಕಾಶವನ್ನೇ ಅವರಿಗೆ ಕೊಡದೆ ಆ ರೀತಿ ಆಗುತ್ತದೆಂಬುದನ್ನು ಯಾವುದನ್ನು ಯೋಚನೆ ಮಾಡುವುದಕ್ಕಾಗುವುದಿಲ್ಲ. ಪ್ರಯೋಗವನ್ನು ಮಾಡಬೇಕಾಗುತ್ತದೆ. ಯಾವ ಜಿಲ್ಲೆ ಇಷ್ಟಪಡುತ್ತದೋ, ಆ ಜಿಲ್ಲೆ ಇದನ್ನು ಇಟ್ಟುಕೊಳ್ಳತಕ್ಕಂತಹದ್ದು ಎಂಬ ಅಂಶ ಕೂಡ ಇದರಲ್ಲಿದೆ. ಮಂಡಲ್ ಪಂಚಾಯತಿ ಹಾಗೂ ಜಿಲ್ಲಾ ಪರಿಷತ್ತು ಇದಕ್ಕೆ ಒಪ್ಪಿಗೆ ಕೊಟ್ಟರೆ ಮಾತ್ರ ನ್ಯಾಯ ಪಂಚಾಯಿತಿಗಳನ್ನು ಮಾಡಿಕೊಳ್ಳಬಹುದು. ಅದು ಇಲ್ಲದಿದ್ದರೆ ಸರ್ಕಾರಕ್ಕೆ ಇದು ಸರಿಯುಲ್ಲ ಎಂದು ಕಂಡು ಬಂದರೆ ವಜಾ ಮಾಡಬಹುದು ಎಂಬ ಅಂಶಗಳನ್ನೂ ಕೂಡ ಇದರಲ್ಲಿ ಕಾಣಿಸಿದ್ದಾರೆ. ಈ ದಿಸೆಯಲ್ಲಿ ಪ್ರಯೋಗವನ್ನು ಮಾಡಬೇಕು ಅಂತ ಮಾಡಿದ್ದೇವೆ, ನಮ್ಮ ಜನತೆಗೆ ಹೆಚ್ಚು ಹತ್ತಿರದಲ್ಲಿ ನ್ಯಾಯವನ್ನು ಕೊಡುವುದಕ್ಕಾಗುತ್ತದೆ. ಮತ್ತೆ ನಾನೂ ಕೂಡ ವಕೀಲನಾಗಿ ಕೆಲಸ ಮಾಡಿದ್ದೇವೆ ಆದ್ದರಿಂದ ನ್ಯಾಯಾಲಯಗಳಲ್ಲಿ ಏನು ನಡೆಯುತ್ತದೆ ಎಂಬುದು ನನಗೆ ಗೊತ್ತಿದೆ. ಹೆಚ್ಚು ನ್ಯಾಯಾಲಯಗಳಲ್ಲಿ ಹೇಗೆ ಕಕ್ಷಿದಾರರು ಮಾತ್ರ ತೀರ್ಮಾನ ಅವರ ಪರವಾಗಿಯೇ ಆಗಲೀ ಅಥವಾ ವಿರೋಧವಾಗಿಯೋ ಆಗಲಿ, ವೈರಿಗಳಾಗಿಯೇ ಉಳಿಯುತ್ತಾರೆ ಎಂಬುದನ್ನು ನೋಡಿದ್ದೇನೆ ಆದರೆ ನ್ಯಾಯ ಪಂಚಾಯಿತಿಗಳಲ್ಲಿ ಅವರನ್ನು ರಾಜೀಮಾಡುವುದಕ್ಕೆ ಪ್ರಯತ್ನ ಮಾಡುಬೇಕು. ನ್ಯಾಯವನ್ನು ಹೇಳತಕ್ಕಂತವರು ಮತ್ತು ಕಕ್ಷಿದಾರರು ವೈರಿಗಳಾಗಿ ಉಳಿಯಕೂಡದು ಅವರ ಮಧ್ಯ ಸ್ನೇಹ ಮೊದಲ ರೀತಿಯಲ್ಲಿ ಆಗಬೇಕು ಕಕ್ಷಿದಾರರನ್ನು ಸ್ನೇಹಿತರನ್ನಾಗಿ ಮಾಡುವುದಕ್ಕೂ ಕೂಡ ಈ ಮಸೂದೆ ಪ್ರಗತಿದಾಯಕವಾಗಿದೆ ಎನ್ನತಕ್ಕಂತ ಹದ್ದು ನನ್ನ ಅಭಿಪ್ರಾಯ. ಆದರೆ ಮತ್ತೆ ನ್ಯಾಯಾಲಯಗಳಿಗೆ ಬಂದಂತಹ ವ್ಯಾಜ್ಯಗಳಿಗೆ ಕಾರಣಗಳನ್ನು ಏನು ಹೇಳುತ್ತಾರೆ, ಆ ಕಾರಣಗಳನ್ನು ತೊರೆದುಹಾಕತಕ್ಕಂತದ್ದು ಅತ್ಯಂತ ಅವಶ್ಯಕ. ಈ ಮಸೂದೆ ಆ ಒಂದು ದೃಷ್ಟಿಯಿಂದಲೂ ಬಹಳ ಸಾಧುವಾದುದಾಗಿದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ವೆ. ರಾಮಕೃಷ್ಣ -- ಈ ಮಸೂದೆಯನ್ನು ತರತಕ್ಕ ಸರ್ಕಾರಕ್ಕೆ ನ್ಯಾಯ ಪಂಚಾಯಿತಿಯಲ್ಲಿ ಅಚಲ ನಂಬಿಕೆ ಇಲ್ಲ. ಜಿಲ್ಲಾ ಪರಿಷತ್ತು ಶಿಫಾರಸ್ಸು ಮಾಡಿದರೆ, ಅದನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ಹಾಗೆಯೇ ಜಾರಿಗೆ ತಂದ ಬಳಿಕ ಅವುಗಳು ಸಮರ್ಪಕವಾಗಿ ಕೆಲಸ ಮಾಡದಿದ್ದರೆ ವಜಾ ಎಂದು ಗೊತ್ತಾಗುತ್ತದೆ, ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಸರ್ಕಾರಕ್ಕೆ ಇದರಲ್ಲಿ ಅಚಲವಾದ ನಂಬಿಕೆ ಇಲ್ಲ.

ಶ್ರೀ ಸಿದ್ಧರಾಮಪ್ಪ.— ಈ ಮಸೂದೆಯಲ್ಲಿ ಏನಾಗಿದೆ ಎಂದರೆ ಇವತ್ತು ಸಾಮಾಜಿಕವಾಗಿ ನಾವು ಬಲಯುತವಾಗಿಲ್ಲ, ಇನ್ನೂ ಕೂಡ ಮೇಲ್ವರ್ಗದ ಜನರೇ ನ್ಯಾಯವನ್ನು ವಿತರಣೆ ಮಾಡುವುದರಲ್ಲಿ ಸೇರಿ ಕೊಳ್ಳುತ್ತಾರೆ. ಇದರಿಂದ ಹೆಚ್ಚು ಬಲಿಷ್ಠರಾದಂತಹವರು ತಮ್ಮ ಪರವಾಗಿ ತೀರ್ಮಾನಗಳನ್ನು ಮಾಡು ತ್ತಾರೆಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಅದರ ಜೊತೆಗೆ ಈ ನ್ಯಾಯ ಪಂಚಾಯಿತಿಯಲ್ಲಿ ಹಿಂದುಳಿದ ವರ್ಗದವರು, ಮಹಿಳೆಯರು ಹಾಗೂ ಹರಿಜನ-ಗಿರಿಜನರು ಈ ಮೂರು ವರ್ಗದ ಪ್ರತಿನಿಧಿಗಳು ಇದರಲ್ಲಿ ಪಾಲುಗಾರರಾಗುತ್ತಾರೆ. ಅವರು ಸತ್ಯವಾಗಿ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅಥವಾ ಸತ್ಯಕ್ಕೆ ವಿರೋಧವಾಗಿ ತೀರ್ಮಾನವಾದರೆ ಅದನ್ನು ಪ್ರತಿಭಟನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಂತಾ ಗುತ್ತದೆ. ಆ ದೃಷ್ಟಿಯಿಂದ ಕಾಲ ಪಕ್ವವಾಗಿಲ್ಲ. ಬುದ್ಧಿವಂತಿಕೆಯಿಂದ ನ್ಯಾಯವನ್ನು ಅತ್ಯಂತ ಸಮರ್ಪಕ ವಾಗಿ ವಿತರಣೆ ಮಾಡುವುದಕ್ಕೆ ಏನು ಹೇಳಿದ್ದಾರೆ. ಅದು ಸರಿಯಾಲ್ಲ. ಆಗುವುದಿಲ್ಲ ಅಂತ ನನ್ನ ದೃಷ್ಟಿ ಯಲ್ಲಿ ಹೇಳುವುದಾದರೆ, ಇದನ್ನು ಹೀಗೆ ಇಟ್ಟುಕೊಂಡು ಹೋದರೂ ಇದರಿಂದೇನೂ ಆಗುವುದಿಲ್ಲ. ಪ್ರಾಯೋಗಿಕವಾಗಿ ಅವಕಾಶ ಕಲ್ಪಿಸಿಕೊಟ್ಟ ಹಾಗೆ ಆಗುತ್ತದೆ. ನ್ಯಾಯವನ್ನು ಹತ್ತಿರದಲ್ಲೇ ಪಡೆಯುವುದ ರಿಂದ, ಬಹಳಷ್ಟು ಅನುಕೂಲಗಳಾಗುತ್ತವೆ. ಇದರಿಂದ ಕೋರ್ಟುಗಳಿಗೆ ಹೋಗತಕ್ಕಂತಹ ವ್ಯಾಜ್ಯಗಳೂ ಕೂಡ ಕಡಿಮೆಯಾಗುತ್ತವೆ ಎನ್ನುವ ದೃಷ್ಟಿಯಿಂದ ನ್ಯಾಯ ಪಂಚಾಯಿತಿಯನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ ಈ ಮಸೂದೆ ಬಹಳಷ್ಟು ಮಟ್ಟಿಗೆ ಹಳ್ಳಿಗಾಡಿನ ಬೆಳವಣಿಗೆ ಹಾಗೂ ಹಳ್ಳಿಗಾಡಿನ ಜನರು ಅವರವರ ಭವಿಷ್ಯವನ್ನು ರೂಢಿಸಿಕೊಂಡು ನೆಮ್ಮದಿಯಿಂದ ಬದುಕುವುದಕ್ಕೆ ಅವಕಾಶವನ್ನು ಮಾಡಿಕೊಂಡು ಬಿಟ್ಟರೆ. ಹಳ್ಳಿಗಾಡಿನ ಜನರ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಯನ್ನು ತರತಕ್ಕ ದಿಕ್ಕಿನಲ್ಲಿ ಪ್ರಾಮಾಣಿಕವಾದ ಎಲ್ಲ ಪ್ರಯತ್ನವನ್ನು ಇದು ಮಾಡುವುದರ ಜೊತೆಗೆ. ರಾಜ್ಯಾಂಗದಲ್ಲಿ ಇರತಕ್ಕ ಎಲ್ಲ ಅಧಿಕಾರವನ್ನು ರಾಜ್ಯ ಮಟ್ಟದಲ್ಲಿ ಸರ್ಕಾರ ಬಳಸಿಕೊಂಡು ಒಂದು ಜನತಂತ್ರದ ವಿಕೇಂದ್ರೀಕರಣ ವನ್ನು ಈ ಮೂಲಕ ತರತಕ್ಕಂತಹದ್ದು ಸ್ವಾಗತಾರ್ಹ. ಈ ಮಸೂದೆಯನ್ನು ನಾನು ಮತ್ತೊಮ್ಮೆ ಸ್ವಾಗತ ಮಾಡುತ್ತಾ, ನನಗೆ ಮಾತನಾಡಲು ಅವಧಿಯನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಆರ್. ಹೆಗಡೆ.— (ಅಂಕೋಲ) ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತು ತಾಲ್ಲೂಕು ಹಾಗೂ ಮಂಡಲ್ ಪಂಚಾಯಿತಿ ಮಸೂದೆಯ ಬಗ್ಗೆ ನನಗೆ ಕಂಡ ರೀತಿಯಲ್ಲಿ, ನನ್ನ ಅನುಭವದಿಂದ ವಿಶ್ಲೇಷಣೆ ಮಾಡುತ್ತಾ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ತಮ್ಮ ಮೂಲಕ ಕೊಡಬೇಕೆಂದು ಇಷ್ಟಪಡುತ್ತಿದ್ದೇನೆ. ತಾಲ್ಲೂಕು ಬೋರ್ಡುಗಳು ಹಾಗೂ ಪಂಚಾಯಿತಿ ಗಳನ್ನು ರದ್ದು ಮಾಡಿ ಜಿಲ್ಲಾ ಪರಿಷತ್ತನ್ನು ಮಾಡುವಾಗ ಅದು 2 ಟೈರ್ ಸಿಸ್ಟಂ ಇರಬೇಕೋ ಅಥವಾ 3 ಟೈರ್ ಸಿಸ್ಟಂ ಇರಬೇಕೋ ಎಂಬುದರ ಬಗ್ಗೆ ಬಹಳ ಚರ್ಚೆಯಾಗಿ ಕೊನೆಗೆ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಹೆಚ್ಚಿನ ಸ್ಥಾನವನ್ನು ಕೊಟ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ನಾನೂ ಕೂಡ ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿ ೪ ವರ್ಷಗಳ ಕಾಲ ಕೆಲಸ ಮಾಡಿದ್ದೇವೆ. ತಾಲ್ಲೂಕು ಬೋರ್ಡು ಕೂಡ ಒಳ್ಳೆಯ ಕೆಲಸ ಮಾಡಬಹುದೆಂಬುದನ್ನು ಆಗಿನ ಪರಿಸ್ಥಿತಿಯಲ್ಲಿ ಸರ್ಕಾರವೇ ನನ್ನ ವಿರುದ್ಧ ವಾಗಿದ್ದರೂ, ಒಳ್ಳೆಯ ಕೆಲಸ ಮಾಡಿ, ಉತ್ತಮವಾದ ತಾಲ್ಲೂಕು ಬೋರ್ಡು ಎಂಬ ಹೆಸರನ್ನು ಪಡೆದು ನಾನು ಮೈಸೂರು ಅವಾರ್ಡನ್ನು ಪಡೆದುಕೊಂಡಿದ್ದೇನೆ. ಅಂದ ಮೇಲೆ ತಾಲ್ಲೂಕು ಬೋರ್ಡಿನಲ್ಲಿ ಒಳ್ಳೆಯ ರೀತಿ ಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದು ತಪ್ಪು. ಯಾವ ಕಾರಣದಿಂದ ಇವತ್ತು ಇದು ಕುಂಠಿತವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಯಾವ ರೀತಿ ಮಾಡಬೇಕು ಎನ್ನುವುದನ್ನು ವಿಚಾರ ಮಾಡಿ ಯೋಜನೆಯನ್ನು ತಂದರೆ ಬಹಳ ಒಳ್ಳೆಯದು. ಏನೇ ಇರಲಿ ಜನತೆ ಕೈಯಲ್ಲಿ ಅಧಿಕಾರವನ್ನು ಕೊಡು ತ್ತೇವೆ ಎಂದು ಹೇಳಿ ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡುಗಳನ್ನು ವಿಸರ್ಜನೆ ಮಾಡಿ ಹೊಸದಾಗಿ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತಿನ ಮುಂಖಾಂತರವಾಗಿ ಏನು ಅಧಿಕಾರ ಕೊಡುತ್ತೀದ್ದೀರೋ, ಇದನ್ನು ವಿಚಾರ ಮಾಡಿದಾಗ ಇದರಲ್ಲಿ ಒಂದು ಅಂಶ, ಅವರು ವಿಚಾರ ಮಾಡಿಲ್ಲವೆಂದು ನನಗೆ ಕಾಣುತ್ತದೆ. ಏಕೆಂದರೆ, ಜನಸಂಖ್ಯೆ ಮೇಲೆ ಪಂಚಾಯ್ತಿ ರಚನೆ ಮಾಡಿದರೆ ಯಾವುದೇ ಪಂಚಾಯ್ತಿ ನಮ್ಮ ಜಿಲ್ಲೆಯಲ್ಲಿ ಒಳ್ಳೆಯ ರೀತಿಯಲ್ಲಿ ನಡೆಯಲಿಕ್ಕೆ ಸಾಧ್ಯವಿಲ್ಲ. 5 ಸಾವಿರ ಜನಸಂಖ್ಯೆ ಇದ್ದು, ಅದು 25 ಕಿಲೋಮೀಟರ್ ವಿಸ್ತರಣೆ ಪಡೆಯುತ್ತದೆ. ನಾನು ಹಿಂದೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಆಗಿದ್ದಾಗ 19 ಪಂಚಾಯ್ತಿ ಇದ್ದುದನ್ನು 33 ಪಂಚಾಯ್ತಿಗಳನ್ನು ಮಾಡಿದ್ದೇನೆ. ಸಣ್ಣ ಪಂಚಾಯ್ತಿ ಮಾಡಿದರೆ ಕೆಲಸ ಆಗುವುದಿಲ್ಲವೆಂದು ಹೇಳುವುದು ತಪ್ಪು ದೊಡ್ಡ ಪಂಚಾಯ್ತಿ ಆದರೆ ಕೆಲಸ ಆಗುತ್ತದೆಂದು ಹೇಳುವುದೂ ತಪ್ಪು. ಬಯಲು ಸೀಮೆಯಲ್ಲಿ 5 ಕಿಲೋಮೀಟರ್‌ನಲ್ಲಿ 5 ಸಾವಿರ, 10 ಸಾವಿರ ಜನಸಂಖ್ಯೆ ಇರಬಹುದು. ಅಲ್ಲಿ ಕೆಲಸ

ಮಾಡಲಿಕ್ಕೆ ಸುಲಭ ಇರಬಹುದು. ನಮ್ಮ ಮಲೆನಾಡಿನಲ್ಲಿ 30 ಮೈಲಿ, 40 ಮೈಲಿ ಕೂಡಿಸಿದರೂ 10 ಸಾವಿರ, 20 ಸಾವಿರ ಜನಸಂಖ್ಯೆ ಆಗುವುದಿಲ್ಲ ಆದ್ದರಿಂದ ಅಂತಹ ಪ್ರದೇಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಯೋಜನೆ ಮಾಡಬೇಕು. ಈಗ ಒಂದೂವರೆ ಸಾವಿರದಿಂದ ಐದು ಸಾವಿರದವರೆಗೆ ಹೆಚ್ಚಿಸಿರುವುದಕ್ಕೆ ಕಷ್ಟವಾಗುತ್ತದೆ. ಮೊದಲನೆಯದಾಗಿ, ಈ ಕ್ಷೇತ್ರದ ವಿಸ್ತರಣೆಯನ್ನು ಗಣನೆಗೆ ತೆಗೆದುಕೊಳ್ಳದೆ ಇದ್ದರೆ ಪಂಚಾಯಿತಿ ರಾಜ್ಯದಲ್ಲಿ ನಾವು ಜನತೆಗೆ ಸವಲತ್ತನ್ನು ಕೊಡುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ. ಪುನರ್ ವಿಂಗಡಣೆ ಮಾಡುತ್ತೇವೆಂದು ಮಾತನಾಡುವುದು ಸುಲಭ. ಮಾತಿನಲ್ಲಿ ಚಂದನಾದ ಸ್ವರ್ಗವನ್ನು ಇಳಿಸಬಹುದು, ಆದರೆ ಪ್ರಾಕ್ಟಿಕಲ್ ಆಗಿ ಇಳಿಸುವುದಕ್ಕೆ ಕಷ್ಟವಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡಿ, ಪಂಚಾಯಿತಿಯನ್ನು ಪುನರ್ ವಿಂಗಡಣೆ ಮಾಡುವುದರಲ್ಲಿ ನಿಮ್ಮ ಮುಖ್ಯವಾದ ಉದ್ದೇಶ ಏನಿದೆ ಎಂದು ಕೇಳಬೇಕಾಗುತ್ತದೆ ಅದಷ್ಟು ಬೇಗ ಜನತೆಯ ಹತ್ತಿರ ಹೋಗಬೇಕು ಎನ್ನುವುದಾದರೆ, ಈಗಿರುವ ಪರಿಸ್ಥಿತಿಯಲ್ಲಿ ಕೂಡಲೇ ಎಲೆಕ್ಷನ್ ಮಾಡಬಹುದು. ಹೀಗೆ ಜನತೆಯ ಹತ್ತಿರ ಹೋಗಬಹುದು. ಪುನರ್ ವಿಂಗಡಣೆ ಮಾಡಿ, ಒಂದಕ್ಕೊಂದು ಪಂಚಾಯಿತಿಯನ್ನು ಕೂಡಿಸಿದಾಗ ಅಥವಾ ಪಂಚಾಯಿತಿಯನ್ನು ಹಿಡಿದಾಗ ಒಂದು ವರ್ಷದಲ್ಲಿ ನಿಕಾಲಿ ಆಗತಕ್ಕಂತಹ ಸಮಸ್ಯೆ ಅಲ್ಲ ಆ ಸಮಸ್ಯೆಯಿಂದ ಅನೇಕ ಹೊಸ ಹೊಸ ಸಮಸ್ಯೆಗಳು ಉದ್ಭೂತವಾಗುತ್ತವೆ ಇವತ್ತು ಜನತೆ ಕೈಯಲ್ಲಿ ಸರ್ಕಾರ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎನ್ನುವುದಾದರೆ ಈಗಿದ್ದ ಪರಿಸ್ಥಿತಿಯಲ್ಲಿ ಜನತೆ ಹತ್ತಿರ ಹೋಗಬೇಕಾಗಿದೆ. ಈ ರೀತಿಯಾಗಿ ಜಿಲ್ಲಾ ಪರಿಷತ್ತಿನ ಬಗ್ಗೆ ಒಂದು ಸಲಹೆ ಮಾಡುತ್ತೇನೆ ತಾಲ್ಲೂಕು ಬೋರ್ಡ್, ಜಿಲ್ಲಾ ಬೋರ್ಡ್ ಹಾಗೂ ಪಂಚಾಯಿತಿ ಚುನಾವಣೆಗಳನ್ನು ಮಾಡಿ ನೇರವಾಗಿ ಜನ ಹತ್ತಿರ ಹೋಗಬೇಕು. ಇಲ್ಲದೇ ಹೋದರೆ ನಿಮ್ಮ ಈಗಿನ ಯೋಜನೆಯಂತೆ, ಪಂಚಾಯಿತಿಯನ್ನು ರಚನೆ ಮಾಡಲಿಕ್ಕೆ ಹೋದರೆ, ಇಲ್ಲಿಯವರಿಗೆ ನೀವು ಹೇಳಿದಂತಹ ಯೋಜನೆಗಳು ಬರೀ ಕಾಗದದ ಯೋಜನೆಗಳಾಗಿ ಉಳಿಯುತ್ತವೆಯೋ ಹೊರತು ಈ ಯೋಜನೆಗಳು ಜನತೆ ಹತ್ತಿರ ಹೋಗುವುದರೊಳಗೆ ಬೇರೆ ಪರಿಸ್ಥಿತಿ ಉದ್ಭೂತವಾಗುತ್ತದೆ. ನಿಮಗೆ ನಿಜವಾಗಿ ಕಳಕಳಿ ಇರುವುದಾದರೆ ಸರ್ಕಾರಕ್ಕೆ ಜನತೆಯ ಕೈಯಲ್ಲಿ ಕೂಡಲೇ ಅಧಿಕಾರವನ್ನು ಕೊಡಬೇಕು ಎನ್ನುವುದಾದರೆ ಈಗಿರತಕ್ಕ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ಚುನಾವಣೆಗಳನ್ನು ಮಾಡಬೇಕು ಈಗ ಜಿಲ್ಲಾ ಪರಿಷತ್ತು ಮಾಡಬೇಕು ಎಂದು ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಇದು ಸೂಕ್ತವಾದಂಥ ಕ್ರಮ. ಈ ಜಿಲ್ಲಾ ಪರಿಷತ್ತನ್ನು ಕಾರ್ಯರೂಪಕ್ಕೆ ತಂದರೆ ಜನತೆಯ ಹತ್ತಿರ ಹೋಗುವುದಕ್ಕಾಗುತ್ತದೆ ಇಲ್ಲದೇ ಹೋದರೆ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ ಹಿಂದಿನ ಅನೇಕ ಯೋಜನೆಗಳಂತೆ ಇದೂ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಇನ್ನೊಂದು ವಿಷಯವೇನೆಂದರೆ, ದೊಡ್ಡ ದೊಡ್ಡ ಪಂಚಾಯಿತಿಗಳನ್ನು ಮಾಡಿದಾಗ, ಆ ಪಂಚಾಯಿತಿ ಯಾವ ಹೆಡ್‌ಕ್ವಾರ್ಟರ್‌ನಲ್ಲಿದೆಯೋ ಅದರ ಸುತ್ತಮುತ್ತ ಅಭಿವೃದ್ಧಿಯಾಗುತ್ತದೆಯೋ ಹೊರತು ಅದರ ಹೊರಗೆ ಆಗುವುದಿಲ್ಲ. ಬೆಂಗಳೂರು ಹೆಡ್‌ಕ್ವಾರ್ಟರ್ ಆಗಿರುವುದರಿಂದ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರದೇಶಗಳು ಅಭಿವೃದ್ಧಿಯಾಗುತ್ತವೆ ಮತ್ತು ಪ್ರಭಾವಯುತವಾಗುತ್ತವೆ. ದೂರದಲ್ಲಿರುವಂತಹ ಗುಲ್ಬರ್ಗ, ಉತ್ತರ ಕನ್ನಡ ಮುಂತಾದ ಜಿಲ್ಲೆಗಳು ನಿರ್ಲಕ್ಷವಾಗುತ್ತವೆ ಹಾಗೆಯೇ ಪಂಚಾಯಿತಿಗಳಲ್ಲೂ ಕೂಡ ವಿಸ್ತಾರವಾದಂತಹ ಪಂಚಾಯಿತಿಗಳಾದಾಗ ಪಂಚಾಯಿತಿ ಹೆಡ್‌ಕ್ವಾರ್ಟರ್ ಪ್ರದೇಶಗಳಲ್ಲಿ ಯಾರು ಪ್ರಭಾವಯುತರಾಗಿರುತ್ತಾರೋ ಅಂತಹವರ ಪ್ರದೇಶದಲ್ಲಿ ಮಾತ್ರ, ಅಭಿವೃದ್ಧಿಯಾಗುತ್ತದೆಯೋ ಹೊರತು, ಹೊರಗೆ ಅಭಿವೃದ್ಧಿಯಾಗುವುದಿಲ್ಲ. ಆದುದರಿಂದ ಪಂಚಾಯಿತಿಗಳನ್ನು ಎಷ್ಟು ಸಣ್ಣದು ಮಾಡುತ್ತೀರೋ ಅಷ್ಟು ಹೆಚ್ಚಿನ ಅಭಿವೃದ್ಧಿಯಾಗುತ್ತದೆ ಅಲ್ಲಿನ ಕಾರ್ಯಕ್ಕೆ ಅನುಸಾರವಾಗಿ ನಡೆಯಬೇಕಾಗುತ್ತದೆ. ಈ ಪಂಚಾಯಿತಿ ಬಿಲ್ಲಿನಲ್ಲಿ ಅನೇಕ ವಿಚಾರಗಳನ್ನು ನೀವು ಹೇಳಿದ್ದೀರಿ. ಇಲ್ಲಿ ನೀವು ಎಲ್ಲೂ ಇಲ್ಲದೇ ಇದ್ದಂತಹ ಹೊಸ ಹೊಸ ಯೋಜನೆಗಳನ್ನು ಮಾಡಿದ್ದೀರಿ ಇಲ್ಲಿ ಅನುದಾನ ಕೊಡಬೇಕಾದರೆ ತಲೆಗೆ 5 ರಿಂದ 10 ರೂ ಎಂದು ಹೇಳಿದ್ದೀರಿ. ತಲೆಪಟ್ಟಿ ವ್ಯಾಪಾರವನ್ನು ಬಿಡಬೇಕು. ಈ ರೀತಿ ಮಾಡುವುದಾದರೆ ನಾಳೆ ಇದನ್ನೇ ಉಲ್ಟ ಮಾಡಿ ತಲೆಪಟ್ಟಿ ವಸೂಲಿ ಮಾಡುವುದಕ್ಕೆ ಹೋಗುತ್ತೀರಿ. ಟ್ಯಾಕ್ಸ್ ಹಾಕಬೇಕಾದರೆ ತಲೆಗೆ ಇಂತಿಷ್ಟು ಎಂದು ಹೇಳಬಹುದು ಆದ್ದರಿಂದ ಈ ತಲೆಪಟ್ಟಿ ಲೆಕ್ಕದ ವ್ಯಾಪಾರವನ್ನು ಸರ್ಕಾರ ಖಂಡಿತವಾಗಿಯೂ ಬಿಡಬೇಕು. ನಮ್ಮ ಸ್ನೇಹಿತರು ಹೇಳಿದಹಾಗೆ, ಫ್ಯಾಮಿಲಿ ಪ್ಲಾನಿಂಗ್ ಬರಲಿಕ್ಕಿಲ್ಲ. ಏಕೆಂದರೆ, ಹೆಚ್ಚು ಹಣ ಸಂಪಾದನೆ ಆಗಬೇಕು. ಇದಕ್ಕಿಂತ 25 ಸಾವಿರಕ್ಕೆ ಕಡಿಮೆ ಆಗದಷ್ಟು ಅಥವಾ 50 ಸಾವಿರಕ್ಕೆ ಕಡಿಮೆ ಆಗದಷ್ಟು ನಿಗದಿಯಾದ ಹಣವನ್ನು ಒಂದು ಪಂಚಾಯಿತಿಗೆ ಕೊಡುತ್ತೇವೆಂದು ಹೇಳಬೇಕು. ಅದನ್ನು ಬಿಟ್ಟು ತಲೆಗೆ 5 ರೂಪಾಯಿಯಿಂದ 10 ರೂಪಾಯಿ ಕೊಡುತ್ತೇವೆಂದು ಏನು ಹೊಸದಾಗಿ ವಿಚಾರ ಮಾಡುತ್ತಿದ್ದೀರಿ, ಈ ಒಂದು ಕೆಟ್ಟ ಸಂಪ್ರದಾಯಕ್ಕೆ ಹೋಗಬಾರದು, ಇದರಿಂದ ಅನೇಕ ರೀತಿಯ ತೊಂದರೆ ಆಗುತ್ತದೆಂದು ನಾನು ಸೂಚಿಸಲಿಕ್ಕೆ ಬಯಸುತ್ತೇನೆ.

ಮತ್ತೊಂದು ವಿಚಾರವೆಂದರೆ, ನನ್ನ ಮಲೆನಾಡು ಏರಿಯಾಕ್ಕೆ ಸಂಬಂಧಪಟ್ಟ ಹಾಗೆ ಅತಿ ಮಹತ್ವವಾದಂತಹ ವಿಚಾರವನ್ನು ಏನು ಮಾಡಿದ್ದಾರೆ, ಇದನ್ನು ನಮ್ಮನ್ನು ಗೋಳು ಹೊಯ್ದುಕೊಳ್ಳಲಿಕ್ಕೆ ಮಾಡಿದ್ದಾರೆ ಇದು ಬಯಲು ಸೀಮೆಯಲ್ಲಿ ಇರಬಹುದು ಅಥವಾ ತಾಲ್ಲೂಕುಗಳಲ್ಲಿರಬಹುದು ಇದು ಸ್ಮಶಾನದ ವಿಚಾರ ನಮ್ಮಲ್ಲಿ ಒಂದೊಂದು ಮನೆಯವರು ಒಂದೊಂದು ಕಡೆ ಹೂಳುವುದು, ಸುಡುವುದು ಮಾಡುತ್ತಾರೆ. ಇದನ್ನು ಮಾಡಬೇಕಾದರೂ ಇದು ತನ್ನ ಸ್ಮಶಾನ ಎಂದು ರಿಜಿಸ್ಟರ್ ಮಾಡಿಸಬೇಕು. ಇಲ್ಲದೇ ಹೋದರೆ ಅವರ ಅಪ್ಪನನ್ನು ಸುಡಲಿಕ್ಕೆ ಜಾಗವಿಲ್ಲ ಪಂಚಾಯ್ತಿಯವರು ಎಲ್ಲೆಲ್ಲಿ ಸ್ಮಶಾನ ಭೂಮಿ ಇದೆ ಎನ್ನುವುದನ್ನು ಪತ್ತೆ ಮಾಡಿ, ಅದನ್ನು ನಿಗದಿ ಮಾಡತಕ್ಕ ಅವಕಾಶ ಮಾಡಿಕೊಟ್ಟಿದ್ದೀರಿ. ಪಂಚಾಯ್ತಿಗೆ ಸ್ಮಶಾನ ಇಲ್ಲದೇ ಹೋದರೆ ಜನಗಳಿಗೆ ತೊಂದರೆಯಾಗುತ್ತದೆಯೇ ಹೊರತು ಇದರಲ್ಲಿ ಯಾವ ಅನುಕೂಲವನ್ನು ಮಾಡಿಕೊಟ್ಟಿದ್ದೀರಿ ಪಂಚಾಯ್ತಿಗೆ ಸ್ಮಶಾನ ಭೂಮಿ ಇಲ್ಲದೇ ಜನಗಳಿಗೆ ತೊಂದರೆ ಮಾಡುತ್ತಿದ್ದೀರಿ. ಈ ವಿಚಾರದಲ್ಲಿ ತಾವು ಸೂಕ್ತವಾಗಿ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, ಜಿಲ್ಲಾ ಪರಿಷತ್ತನ್ನು ನೀವು ಮಾಡಿದ್ದೀರಿ. ಇದರಲ್ಲಿ ಅತಿ ಮಹತ್ವವಾದಂತಹ ವಿಚಾರವನ್ನು ನೋಡಬೇಕು. ಈ ಜಿಲ್ಲಾ ಪರಿಷತ್ತಿಗೆ ಜಿಲ್ಲೆಯ ಜಿಲ್ಲಾಧಿಕಾರಿ ಯಾವರೀತಿ ಹೊಣೆಗಾರನಾಗುತ್ತಾನೆ ಜಿಲ್ಲಾ ಪರಿಷತ್ತಿಗೆ ಬೇರೆ ಜಿಲ್ಲಾಧಿಕಾರಿ ಅದಕ್ಕೆ ತತ್ಸಮಾನವಾದಂತವನು ಇರುತ್ತಾನೆಯೇ ಹಾಗಾದರೆ ಒಬ್ಬ ಜಿಲ್ಲಾಧಿಕಾರಿ ಯಾವ ಕೆಲಸವನ್ನು ಮಾಡಬೇಕು. ಇದರೊಳಗೆ ಹೊಂದಾಣಿಕೆ ಹೇಗೆ ಬರುತ್ತದೆ. ಇವರು ಕೆಲಸ ಮಾಡುವುದು ಹೇಗೆ ? ಇದನ್ನೆಲ್ಲಾ ವಿಚಾರ ಮಾಡಿದಾಗ ಮತ್ತೊಂದು ರೀತಿಯಲ್ಲಿ ಜಿಲ್ಲಾಧಿಕಾರಿಯನ್ನು ಪ್ರತ್ಯೇಕವಾಗಿಟ್ಟು ಇದಕ್ಕೆ ಜಿಲ್ಲಾಧಿಕಾರಿಯನ್ನು ಮಾಡಿದಾಗ, ಹಿಂದೆ ಜಿಲ್ಲಾ ಬೋರ್ಡುಗಳು ಏನು ಇತ್ತು ಅದೇ ಪರಿಸ್ಥಿತಿ ಬರುತ್ತದೆಂದು ಕಾಣುತ್ತದೆ. ಜಿಲ್ಲಾ ಬೋರ್ಡುಗಳು ಏನಿತ್ತು ಅವು ಕೆಲಸ ಮಾಡುತ್ತಿದ್ದುವು, ಅದು ಪ್ರತ್ಯೇಕವಾದ ಅಂಗವಾಗಿತ್ತು, ಹಾಗಿದ್ದರೂ ನೀವು ಕೊಟ್ಟಂಥ ಅನೇಕ ಯೋಜನೆಗಳು ಏನಿವೆ, ಇವು ಸರಿಯಾದಂತಹ ರೀತಿಯಲ್ಲಿ ಕೆಲಸಕ್ಕೆ ಬರುವುದಿಲ್ಲ. ಇದರಲ್ಲಿ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಇರತಕ್ಕಂತಹ ಅಧಿಕಾರಿಗಳಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದೆ, ಕೆಲಸ ಕುಂಠಿತವಾಗುತ್ತದೆ. ಇದರಿಂದ ಪಂಚಾಯ್ತಿ ರಾಜ್ಯ ವ್ಯವಸ್ಥೆಯಾಗಲೀ ಮುಖ್ಯವಾಗಿ ಡೆವಲಪ್‌ಮೆಂಟ್‌ವರ್ಕ್ಸ್ ಆಗಲೀ ಕುಂಠಿತವಾಗುತ್ತದೆ. ಒಂದೊಂದು ಶಾಖೆಯಲ್ಲಿ ಸರಿಯಾದಂತಹ ಹೊಂದಾಣಿಕೆ ಇಲ್ಲದೆ ಹೋದುದರಿಂದ ಅನೇಕ ಅಭಿವೃದ್ಧಿ ಕೆಲಸಗಳು ಆಗುತ್ತಾ

12-30 P. M.

ಇಲ್ಲ. ಮುಂದೆ ಸಹ ಇದು ಇನ್ನೂ ಹೆಚ್ಚಿಗೆ ಕೆಲಸ ಕಾರ್ಯಗಳು ಆಗದೆ ಹೋಗುವುದಕ್ಕೆ ಅವಕಾಶ ಆಗಬಹುದು. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಗ್ರಾಮ ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟಕ್ಕೆ ಹೋದಾಗ ಅದರಿಂದ ವಿಕೇಂದ್ರೀಕರಣ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ತಾಲ್ಲೂಕು ಬೋರ್ಡ್ ಏನಿದೆ ಅದು ಇರಲೇ ಬೇಕಾಗುತ್ತದೆ ಅದು ಇಲ್ಲದೆ ಹೋದರೆ ಹಳ್ಳಿಗಳಿಗೆ ಸಂಪೂರ್ಣವಾಗಿ ನ್ಯಾಯ ಸಿಗುವುದಿಲ್ಲ. ಏಕೆಂದರೆ ಎಲ್ಲ ಪಂಚಾಯಿತಿಗಳು ಕೂಡಿ ಜಿಲ್ಲೆಯಲ್ಲಿ ತಮ್ಮ ಬೇಡಿಕೆಯನ್ನು ಇಡಬೇಕು ; ಇಲ್ಲದೇ ಹೋದರೆ ಅಲ್ಲಿ ಕೆಲಸ ಮಾಡಬೇಕೆಂದರೆ ಸಾಧ್ಯವಾಗುವುದಿಲ್ಲ. ತಾಲ್ಲೂಕು ಘಟಕಗಳನ್ನು ಈಗ ಇದ್ದಂತೆ ಇಡದಿದ್ದರೆ ಇನ್ನೂ ಹೆಚ್ಚಿನ ಲುಕ್ಸಾನು ಗ್ರಾಮದವರಿಗೆ ಆಗುತ್ತದೆ. ಏಕೆಂದರೆ ಪರಸ್ಪರ ಸರಿಯಾದ ಹೊಂದಾಣಿಕೆ ಇರುವುದಿಲ್ಲ. ಅದಕ್ಕೋಸ್ಕರ ಪಂಚಾಯತಿಯ ಬಗ್ಗೆ ವಿಚಾರ ಮಾಡಿದ್ದು ಸಾಕಾಗಲಿಲ್ಲ ; ಇದರ ಬಗ್ಗೆ ಇನ್ನೂ ಹೆಚ್ಚಿನ ಅನುಭವ ಪಡೆಯಬೇಕು. ಏನೋ ಒಂದು ಮಾಡುತ್ತೇವೆ. ಕನಸು ಕಾಣುತ್ತೇವೆಂದು ಹೇಳಿದರೆ ಆಗುವುದಿಲ್ಲ. ಆದ್ದರಿಂದ ಜಿಲ್ಲಾ ಪರಿಷತ್ತನ್ನು ಕಾರ್ಯರೂಪಕ್ಕೆ ತಂದು ಕೆಲಸ ಮಾಡಿದರೆ ನಿಮಗೆ ನಿಜವಾಗಿ ಜನತೆಯ ಹತ್ತಿರ ಹೋಗುವ ಮನಸ್ಸು ಇದೆ ಎಂದು ಹೇಳಬಹುದು. ಇಲ್ಲದಿದ್ದರೆ, ಬರೀ ಹಕ್ಕಿ ಹಾರಿಸುತ್ತೀರಿ ಎಂದು ಹೇಳಬೇಕಾಗುತ್ತದೆ. ಮೊದಲಿಗೆ ನ್ಯಾಯ ಪಂಚಾಯಿತಿಗಳನ್ನು ಖಂಡಿತ ಕೈಬಿಡಬೇಕು ಇದನ್ನು ಮಾಡಿದರೆ ಇನ್ನೂ ಹೆಚ್ಚಿನ ಕಿರುಕುಳ ಆಗುತ್ತದೆಂದು ತಮ್ಮ ಮೂಲಕ ಸರ್ಕಾರದ ಗಮನ ಸೆಳೆದು, 3 ಟೈರ್ಸ್ ಸಿಸ್ಟಂ ಏನಿದೆ ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಮತ್ತೊಮ್ಮೆ ಹೇಳಿ ; ನನ್ನ ಅನುಭವದಿಂದ ನೀವು ಮಾಡಿರತಕ್ಕ ಬಿಲ್ಲನ್ನು ಜಾರಿಗೆ ತಂದರೆ ಮುಂದೆ ನಾನೇ ಇದನ್ನು ಟೀಕೆ ಮಾಡತಕ್ಕ ಪ್ರಸಂಗ ಬರುತ್ತದೆಂದು ಹೇಳಿ ಇರತಕ್ಕ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳನ್ನು ಇದ್ದಂತೆಯೇ ಇಟ್ಟು ಜಿಲ್ಲಾ ಪರಿಷತ್ತನ್ನು ಮಾಡಬೇಕೆಂದು ಹೇಳುತ್ತೇನೆ. ನ್ಯಾಯ ಪಂಚಾಯಿತಿ ಮಸೂದೆ ಏನಿದೆ ಇದನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಇದರಲ್ಲಿ ಸೇರಿಸದೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಸೂಚನೆ ಕೊಡಬಯಸುತ್ತೇನೆ.

ಶ್ರೀ ಕೆ. ರಾಮಭಟ್ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ಒಟ್ಟಿನಲ್ಲಿ ಈ ಮಸೂದೆಯನ್ನು ಸ್ವಾಗ

ತಿಸುತ್ತೇನೆ. ಮೊದಲಿಗೆ ಇದರ ಹೆಸರನ್ನು ನೋಡುವಾಗ ಬಹಳ ಉದ್ದವಾಗಿ ಕಾಣುತ್ತದೆ. ಕರ್ನಾಟಕ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯತ್ ಹಾಗೂ ನ್ಯಾಯ ಪಂಚಾಯತ್ ಮಸೂದೆ 1983 ಎಂದು ಇದೆ. ಇದನ್ನೇ ಸುಲಭವಾಗಿ ಹೇಳುವುದಾದರೆ ಸ್ಥಳೀಯ ಗ್ರಾಮೀಣ ಸಂಸ್ಥೆಗಳ ಮಸೂದೆ ಎಂದು ಒಂದೇ ಮಾತಿನಲ್ಲಿ ಕರೆಯಬಹುದಾಗಿತ್ತು. ಹಾಲಿ ಇರತಕ್ಕ ಹೆಸರನ್ನು ಬರೆಯುವುದಕ್ಕೆ, ಓದುವುದಕ್ಕೆ ಮತ್ತು ನೆನಪಿಡುವುದಕ್ಕೆ ಬಹಳ ಕಷ್ಟ ಇದೆ. ಇದಕ್ಕೆ ಇಷ್ಟು ಉದ್ದದ ಹೆಸರನ್ನು ಇಡತಕ್ಕ ಉದ್ದೇಶವೇನು?

ಶ್ರೀ ಕೆ. ಜಿ. ಮಹೇಶ್ವರಪ್ಪ.---ಪಂಚಾಯಿತಿ ಆ್ಯಕ್ಟ್ ಎಂದು ಇದ್ದರೆ ಸಾಕಾಗುತ್ತಿತ್ತು.

ಶ್ರೀ ಕೆ. ರಾಮಭಟ್.---ಆದ್ದರಿಂದ ಈ ಹೆಸರನ್ನು ಬದಲಾವಣೆ ಮಾಡತಕ್ಕದ್ದು ಸೂಕ್ತವೆಂದು ನನ್ನ ಅನಿಸಿಕೆ. ಇದರಲ್ಲಿ ನನ್ನ ಆಕ್ಷೇಪಣೆ ಇರುವುದು ಗ್ರಾಮ ಸಭೆಯ ಅಧಿಕಾರದ ಬಗ್ಗೆ. ಗ್ರಾಮಸಭೆ ಅಂದರೆ 10 ರಿಂದ 11 ಸಾವಿರ ಜನಸಂಖ್ಯೆ ಇರುವಂತ ಒಂದು ಮಂಡಲ್ ಪಂಚಾಯಿತಿಯಲ್ಲಿ 5 ಸಾವಿರ ಜನ ಮತದಾರರು ಇರುತ್ತಾರೆ. 5 ಸಾವಿರ ಜನ ಮತದಾರರ ಸಭೆಯನ್ನು ಸೇರಿಸುವ ಬಗೆ ಹೇಗೆ? ಸಭೆ ಸೇರಿಸಬೇಕೆಂದರೆ ಎಲ್ಲರಿಗೂ ನೋಟೀಸ್ ಕೊಡಬೇಕಾಗುತ್ತದೆ. 5 ಸಾವಿರ ಜನರಿಗೆ "ಮಂಡಲ್ ಪಂಚಾಯಿತಿಯಿಂದ ನೋಟೀಸ್ ಕೊಟ್ಟು ಅವರ ಸಭೆ ಸೇರಿಸಿ ಯಾವುದೇ ನಿರ್ಣಯ ತೆಗೆದು ಕೊಳ್ಳುವುದಕ್ಕೆ ಸಾಧ್ಯವೆ? 5 ಸಾವಿರ ಜನ ಸೇರುವುದು ಎಲ್ಲಿ? ಅವರಿಗೆ ಸೇರುವುದಕ್ಕೆ ವ್ಯವಸ್ಥೆ ಎಲ್ಲಿದೆ? ಅವರೆಲ್ಲ ಸೇರಿ ಸರ್ವ ಸಮ್ಮತವಾದ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೆ? ಇದರ ಕಲ್ಪನೆಯನ್ನು ಬಹುಶಃ ಸರ್ಕಾರ ಮಾಡಲಿಲ್ಲವೆಂದು ಕಾಣುತ್ತದೆ. ಮೊದಲು ಪಂಚಾಯಿತಿಯಲ್ಲಿ ಗ್ರಾಮ ಸಭೆಯನ್ನು ಕರೆಯತಕ್ಕದ್ದು ಇತ್ತು. ಆಗ ಅಲ್ಲಿ ಏನೇನು ಮಾಡಿದ್ದಾರೆಂಬ ಸಂಗತಿಗಳನ್ನು ವಿವರಿಸಿ ಹೇಳುವುದಕ್ಕೆ ಅವಕಾಶ ಇತ್ತು. ಈಗಲೂ ಅಷ್ಟಕ್ಕೆ ಸೀಮಿತವಾಗಿದ್ದರೆ ಬಹಳ ಒಳ್ಳೆಯದಿತ್ತು. ಮಂಡಲ್ ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ ಮ್ಯಾಂಡೇಟರಿ ಪವರ್ಸ್ ಎಂದು ಏನು ಕೊಟ್ಟಿದ್ದೀರಿ ಅದರಲ್ಲಿ 5ನೇ ಕಲಂ ಅನ್ನು ನೋಡಬೇಕು. ಅದರಲ್ಲಿ 'shall' ಎಂದು ಹೇಳುವ ಶಬ್ದದ ಅರ್ಥವೇನು? ಈ ಮಂಡಲಿಯಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಕಾರಣಾಂತರಗಳಿಂದ ತೀರ್ಮಾನ ತೆಗೆದುಕೊಂಡರೆ 'shall give due consideration" ಎಂದು ಏನು ಹೇಳಿದ್ದಾರೆ ಇದರ ಅರ್ಥವೇನು? ಇದು ಒಂದಕ್ಕೊಂದಕ್ಕೆ ವಿರೋಧವಾಗಿದೆ ಎಂದು ಹೇಳುತ್ತೇನೆ shall give due consideratio ಅಂದರೆ what is due consideration? ಇದು ಸ್ಪಷ್ಟವಾಗಿದೆ. ಇದರ ಬಗೆ ಸರ್ಕಾರ ಗಮನ ಹರಿಸಿ ವಿಚಾರ ಮಾಡುವುದು ಒಳ್ಳೆಯದು. ಗ್ರಾಮ ಸಭೆಯನ್ನು ಕರೆದು ಮಂಡಲ್ "ಪಂಚಾಯಿತಿಯಲ್ಲಿ ಏನು ಕಾರ್ಯಕ್ರಮ ನಡೆಯುತ್ತದೆ ಅದರ ಬಗ್ಗೆ ವಿವರಣೆ ಕೊಟ್ಟು ಮನೆಗೆ ಕಳುಹಿಸುವುದು ಒಳ್ಳೆಯದು, ಅವರನ್ನು ಚರ್ಚೆಗೆ ಆಹ್ವಾನಿಸಿ ಅವರಿಂದ ನಿರ್ಣಯ ತೆಗೆದುಕೊಳ್ಳುವುದು ಮನುಷ್ಯರಿಂದ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಮಂಡಲ್ ಪಂಚಾಯಿತಿಯ ಬಗ್ಗೆ ನಮ್ಮ ಆಕ್ಷೇಪಣೆಗಳನ್ನು ಹೇಳಿದರೆ ಅದನ್ನು ಸ್ವೀಕಾರ ಮಾಡಿ ಹೆಚ್ಚು ಕಡಿಮೆ ಬದಲಾವಣೆ ಮಾಡುವ ಭರವಸೆಯನ್ನು ಮಂತ್ರಿಗಳು ಕೊಟ್ಟಿದ್ದಾರೆ. ಮಲೆನಾಡು ಪ್ರದೇಶಗಳಿಗೆ ಈಗೇನು ಹೆಚ್ಚು ಕಡಿಮೆ ಮಾಡಿದ್ದಾರೆ ಅದನ್ನು ಸ್ವಾಗತಿಸುತ್ತೇನೆ, ಜಿಲ್ಲಾ ಪರಿಷತ್ತಿನ ವಿಚಾರ ಯಾವ ರೀತಿ ಇದೆಯೋ ಅದನ್ನು ಪೂರ್ಣವಾಗಿ ಸ್ವಾಗತಿಸುತ್ತೇನೆ. ನಾಯಕ್ ಅವರು ಮಾತನಾಡಿದ ಹಾಗೆ ನ್ಯಾಯ ಪಂಚಾಯಿತಿಯಲ್ಲಿ ಮದ್ರಾಸ್ ಆ್ಯಕ್ಟಿನ ಪ್ರಕಾರ ತೀರ್ಮಾನಗಳನ್ನು ಕೊಡತಕ್ಕ ಅವಕಾಶ ಇತ್ತು. ನಾನೂ ಕೂಡ ಕೆಲವು ತೀರ್ಮಾನಗಳನ್ನು ಕೊಟ್ಟಿದ್ದೆ. ಆದರೆ ಆಗಿನ ಕಾಲದಲ್ಲಿ ಜನರು ಪ್ರಾಮಾಣಿಕರಾಗಿದ್ದರು; ನ್ಯಾಯವಂತರಾಗಿದ್ದರು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಪ್ರತಿಯೊಂದು ಮನೆಯಲ್ಲೂ ರಾಜಕೀಯ ತುಂಬಿದೆ.

ಉಪಾಧ್ಯಕ್ಷರು.---ಜನರು ಬಹಳ ಬುದ್ಧಿವಂತರಾಗಿದ್ದಾರೆ.

ಶ್ರೀ ಕೆ. ರಾಮಭಟ್.---ಅತೀ ಬುದ್ಧಿವಂತರಾಗಿದ್ದಾರೆ. ನ್ಯಾಯ ಪಂಚಾಯಿತಿಗೆ ಚುನಾಯಿತ ಸದಸ್ಯ ಅದರ ಪ್ರಧಾನ ವಿಚಾರಕ. ಇದರ ಬಗೆ ಸಚಿವರು ವಿವರವಾಗಿ ಹೇಳುತ್ತಾರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಜನರು ನೆಮ್ಮದಿಯಿಂದ ಜೀವನ ಮಾಡುತ್ತಾ ಇದ್ದಾರೆ ಆದರೆ ನೀವು ಈಗ ಬೆಂಕಿ ಹಚ್ಚುತ್ತಿದ್ದೀರಿ. ಈಗ ನ್ಯಾಯಪಂಚಾಯಿತಿ ಮಸೂದೆಯನ್ನು ಜಾರಿಗೆ ತರುವುದರಿಂದ ಅಲ್ಲಿ ಜನತಾ, ಬಿಜೆಪಿ, ಕಾಂಗ್ರೆಸ್, ಕಮ್ಯುನಿಸ್ಟ್ ನ್ಯಾಯ ಸಿಕ್ಕುತ್ತದೆಂದು ಹೇಳಬಹುದೇ ಹೊರತು ನಿಜವಾದ ನ್ಯಾಯ ಸಿಗುವುದಿಲ್ಲ. ಏಕೆಂದರೆ ಜನವಿಂಗಡಣೆ ಆಗಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.---ನೀವು ಅದಕ್ಕೆ ಓಟು ಮಾಡಬೇಡಿ, ಬಿದ್ದು ಹೋಗಲಿ.

ಶ್ರೀ ಕೆ. ರಾಮಭಟ್.---ನೀವು ನಮಗೆ ಎಷ್ಟರಮಟ್ಟಿಗೆ ಉಪಕಾರ ಮಾಡಿದ್ದೀರೆಂದು ಗೊತ್ತಿದೆ. ಇವರು ನಮ್ಮನ್ನು ತುಳಿದು ಬೇಕಾದಷ್ಟು ಮಾಡಿದ್ದಾರೆ. ಅವರು ನಮ್ಮ ಸ್ನೇಹಿತರಾಗಿರುವುದರಿಂದ

ಅವರಿಗೆ ನಾನು ಸ್ನೇಹಿತನಾಗಿ ಹೇಳುತ್ತಿದ್ದೇನೆ. ನಾವು ಅವರನ್ನು ದ್ವೇಷ ಮಾಡುವುದಿಲ್ಲ. ಕೆಲವು ವಿಚಾರ ಗಳಿಗೆ ಟೀಕೆ ಮಾಡುತ್ತೇವೆ, ಆ ರೀತಿ ಟೀಕೆ ಮಾಡುವ ಹಕ್ಕನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸಚಿವರು ನ್ಯಾಯ ಪಂಚಾಯಿತಿಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಅವರು ಹೇಗೆ ಸರಳ ವ್ಯಕ್ತಿಯೋ ಹಾಗೆ ಎಲ್ಲರೂ ಸಜ್ಜನರು, ಎಲ್ಲರೂ ಒಳ್ಳೆಯವರು ಎಂದು ಹೇಳಿದ್ದಾರೆ. ಆದರೆ ವಾಸ್ತವಿಕವಾಗಿ ಆ ರೀತಿ ಇಲ್ಲ. ಗ್ರಾಮ ಹಳ್ಳಿ ವಸ್ತುಸ್ಥಿತಿ ಬೇರೆ ಇದೆ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಎಲ್ಲ ತಾಲ್ಲೂಕುಗಳಲ್ಲೂ ಭೂ ನ್ಯಾಯ ಮಂಡಲಿಗಳನ್ನು ಮಾಡಿದರು. ಅಲ್ಲಿ ಏನೆಲ್ಲ ಅನಾಹುತವಾಗಿದೆ ಎಂಬ ನೆನಪಾಗುತ್ತಿದೆ. ಒಬ್ಬೊಬ್ಬರು ಎಷ್ಟೆಷ್ಟು ಹಣ ಮಾಡಲಿಕ್ಕೆ ಸಾಧ್ಯವೊ ಅಷ್ಟನ್ನು ಮಾಡಿದ್ದಾರೆ. ಏಕೆಂದರೆ ಜನರು ಅಪ್ರಮಾಣಿಕರಾಗಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ಈಗ ಇವರು ಮಾಡಿದರಲ್ಲ, ಮೊನ್ನೆ ಅಪಾಯಿಂಟ್ ಆಗಿದ್ದ ಟೀಚರ್ಸ್ ಕಮಿಟಿಯ ಗತಿ ಏನಾಯಿತು ?

ಉಪಾಧ್ಯಕ್ಷರು.—ಇವತ್ತು ಅದು ರದ್ದಾಗಿದೆಯಲ್ಲ.

ಶ್ರೀ ಕೆ. ರಾಮುಭಟ್.—ಆದರೆ ಇವರು ಕಲಿಸಿದ ಚಟ ಇದೆಯಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಭೂ ನ್ಯಾಯ ಮಂಡಳಿಯಲ್ಲಿ ಇವರಿಗೂ ಕೂಡ ಪ್ರಾತಿನಿಧ್ಯ ಕೊಟ್ಟಿದ್ದರು. ಆದರೆ ಆಗ ಏತಕ್ಕೆ ಕೇಳಲಿಲ್ಲ ?

ಶ್ರೀ ರಾಮಚಂದ್ರರಾವ್.—ಒಬ್ಬರಿಬ್ಬರು ಎಂ. ಎಲ್. ಎ. ಗಳಿಗೆ ಕೊಟ್ಟಿರಬಹುದು. ಬೇರೆಯವರಿಗೆ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ರೆಕಾರ್ಡ್ ಇದೆ, ನೋಡಿ.

ಶ್ರೀ ಕೆ. ರಾಮುಭಟ್.—ಭೂ ನ್ಯಾಯ ಮಂಡಳಿಯಲ್ಲಿದ್ದ ಸದಸ್ಯರು ತಿಂದು ತಿಂದು ..

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾವು ಮಾಡಿದ ಕಮಿಟಿಗಳಲ್ಲಿ, ಟ್ರಿಬ್ಯುನಲ್‌ಗಳಲ್ಲಿ, ಜಿಲ್ಲಾ ಕಮಿಟಿಗಳಲ್ಲಿ ಬೊಮ್ಮಾಯಿ ಕಡೆಯವರು ದೇವೇಗೌಡರ ಕಡೆಯವರು ಎಷ್ಟು ಜನ ಇದ್ದರು ಎಂಬುದನ್ನು ಕೇಳಿ.

ಶ್ರೀ ಕೆ. ರಾಮುಭಟ್.—ನಾನು ಭೂ ನ್ಯಾಯ ಮಂಡಳಿ ಬಗ್ಗೆ ಹೇಳುತ್ತಿದ್ದೇನೆ. ಶ್ರೀಕಂಠಯ್ಯನವರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಲ್ಲೊಬ್ಬರು ಇಲ್ಲೊಬ್ಬರು ಇದ್ದರು, ಅಷ್ಟೆ.

ಶ್ರೀ ವೈ. ರಾಮಕೃಷ್ಣ.—ಅಷ್ಟಾದರೂ ಇದ್ದರಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲ ಕಮಿಟಿಗಳಲ್ಲಿ 5 ಜನರನ್ನು ಹಾಕಿದ್ದರು. ನಮ್ಮ ಕಡೆಯವರು ಯಾರೂ ಇರಲಿಲ್ಲ.

ಶ್ರೀ ಕೆ. ರಾಮುಭಟ್.—ನಾವು ಆಗ ವಿರೋಧಪಕ್ಷದಲ್ಲಿದ್ದೆವು. ಭೂ ನ್ಯಾಯ ಮಂಡಲಿಯಲ್ಲಿ ನಮಗೂ ಅವಕಾಶ ಕೊಟ್ಟಿದ್ದಾರೆ. ಎಲ್ಲೋ ಒಬ್ಬೊಬ್ಬರಿಗೆ ಕೊಟ್ಟಿದ್ದಾರೆ. ಆದರೆ ಭೂ ನ್ಯಾಯ ಮಂಡಳಿ ಸದಸ್ಯರು ಇವತ್ತು ಯಾವರೀತಿ ಮನೆ ಕಟ್ಟಿದ್ದಾರೆ, ಸಂಪತ್ತು ಎಷ್ಟು ಮಾಡಿದ್ದಾರೆ ಎಂಬುದನ್ನು ನೋಡಬೇಕು. ಮಾನ್ಯ ಶ್ರೀಕಂಠಯ್ಯನವರು ತನಿಖೆ ಮಾಡಿ ಹೇಳಲಿ. ಅದರಿಂದಲೇ ನಿಮ್ಮ ಪಾರ್ಟಿ ಮುಳುಗಿಹೋಯಿತು ಎಂಬುದನ್ನು ಅರ್ಥ ಮಾಡಿಕೊಳ್ಳಿ. ಈ ರೀತಿ ಮಾಡಿದರೆ ನಾಳೆ ಜನತಾ ಪಾರ್ಟಿಗೂ ಮೃತ್ಯು ಆಗಬಹುದು ಎಂದು ಎಚ್ಚರಿಕೆ ಕೊಡುತ್ತಿದ್ದೇನೆ. ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು. ಗ್ರಾಮಗಳಲ್ಲಿ ಸಂಘರ್ಷಣೆ ನಿರ್ಮಾಣ ಮಾಡುವ ಮಸೂದೆ ಈ ನ್ಯಾಯ ಪಂಚಾಯಿತಿ ಮಸೂದೆ. ಸಚಿವರು ಇಟ್ಟಿಲ್ಲ. ಆದರೂ ಎಚ್ಚರಿಕೆ ಕೊಡುತ್ತಿದ್ದೇನೆ, ಇದನ್ನು ದಯವಿಟ್ಟು ಕೈಬಿಡಬೇಕು. ಮೊದಲಿದ್ದ ಪರಿಸ್ಥಿತಿಯಲ್ಲೇ ಇರುವುದು ಒಳ್ಳೆಯದು. ದುರ್ಬಲವರ್ಗದವರಿಗೆ ನ್ಯಾಯ ಸಿಗುತ್ತದೆ ಎಂಬ ಕಲ್ಪನೆ ಮಾನ್ಯ ಮಂತ್ರಿಗಳಿಗಿದೆ. ಇದರಿಂದ ಹಾನಿಯಾಗುತ್ತದೆಯೇ ಹೊರತು ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಇದನ್ನು ಕೈಬಿಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಸನ್ಮಾನ್ಯ ಅಧ್ಯಕ್ಷರೆ, 1983 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕ್ ಪಂಚಾಯಿತ್ ಸಮಿತಿಗಳು, ಮಂಡಲ್ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ವಿಧೇಯಕದ ಮೇಲೆ ಜಂಟಿ ಪರಿಶೀಲನಾ ಸಮಿತಿ ಸಲ್ಲಿಸಿರುವ ವರದಿ ನನ್ನ ಕೈಯಲ್ಲಿದೆ. ಸನ್ಮಾನ್ಯ ಪಂಚಾಯತ್‌ರಾಜ್ ಸಚಿವರಾದ ನಜೀರ್ ಸಾಬ್ ಅವರು ಮಸೂದೆಯನ್ನು ಮಂಡನೆ ಮಾಡಿದ್ದಾರೆ. ನಜೀರ್‌ಸಾಬ್ ಅವರು ಎಲ್ಲರಿಗೂ ಗೊತ್ತಿರುವಂತೆ ಸರಳ ಸ್ವಭಾವದ ವ್ಯಕ್ತಿ. ಅವರು ಸಾಮಾಜಿಕ ನ್ಯಾಯ ದೊರಕಿಸಿಕೊಡುವುದರಲ್ಲಿ ವಿಶೇಷ ಆಸಕ್ತಿ ವಹಿಸಿದ್ದಾರೆ.

ಅಧ್ಯಕ್ಷರು.--ತಾವು ತಮ್ಮ ಭಾಷಣವನ್ನು ಆಮೇಲೆ ಮುಂದುವರೆಸಿ, ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳಬೇಕೆಂದಿದ್ದಾರೆ.

Official Resolution

Reg ; Out breake of violence in the States of Punjab and Haryana

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ, ಸದನದ ಅನುಮತಿಯನ್ನು ಕೋರಿ ನಾನು ಓದಲಿರುವ ಠರಾವನ್ನು ಸದನದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಇತ್ತೀಚಿನ ವಾರಗಳಲ್ಲಿ ಪಂಜಾಬ್ ಮತ್ತು ಹರಿಯಾಣ ಎರಡೂ ರಾಜ್ಯಗಳಲ್ಲಿ ಬೆಳೆದು ಬಂದ ಹಿಂಸಾತ್ಮಕ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಈ ಠರಾವು ಇದೆ. ನಿರ್ಣಯ ಇಂಗ್ಲೀಷಿನಲ್ಲಿರುವುದರಿಂದ ಇಂಗ್ಲೀಷಿನಲ್ಲೇ ಓದುತ್ತೇನೆ. ಕನ್ನಡಕ್ಕೆ ತರ್ಜುಮೆಯಾಗುತ್ತಿದೆ, ಆದ್ದರಿಂದ ಮಾನ್ಯ ಸದಸ್ಯರು ಮನ್ನಿಸಬೇಕು,

"This House representing four crores of people of Karnataka feels deeply concerned, as does every Indian about the out-break of violence in the States of Punjab and Haryana which has resulted in the senseless killings of innocent people and destruction of properties and even desecration of places of worship. The people of these States have great tradition of valour, sacrifice and communal amity. Whatever might be the problems, every attempt should be made to solve them peacefully through negotations. Violence will only beget more violence and will not lead to any settlement of disputes.

This House most fervantly appeals to the people of both of Punjab and Haryana to eschew all kinds of violence and create an atmosphere of peace, tranquility and harmony conducive for the solution of the problems, so that national unity, integrity and solidarity are maintained."

ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಉದ್ದವಾಗಿ ಭಾಷಣ ಮಾಡುವ ಅಗತ್ಯ ಇಲ್ಲ. ಕೆಲವು ತಿಂಗಳುಗಳಿಂದ ಪಂಜಾಬಿನಲ್ಲಿ ಇತ್ತೀಚೆಗೆ ಹರಿಯಾಣದಲ್ಲಿ ನಡೆದಿರತಕ್ಕ ಹಿಂಸಾತ್ಮಕ ಘಟನೆಗಳಿಂದ ನಮ್ಮ ದೇಶದ ಎಲ್ಲ ರಾಜ್ಯಗಳಲ್ಲೂ ಪ್ರತಿಯೊಬ್ಬ ನಾಗರೀಕನಿಗೂ ವ್ಯಥೆಯಾಗಿದೆ. ವಿಷಾದನೀಯವಾಗಿದೆ. ಸಮಸ್ಯೆಗಳು ಅನೇಕ ಇರುತ್ತವೆ. ಜಟಿಲವಾದ ಸಮಸ್ಯೆಗಳೂ ಇರಬಹುದು ಆದರೆ ಯಾವುದೇ ಸಮಸ್ಯೆಯನ್ನು ಹಿಂಸಾತ್ಮಕ ಮಾರ್ಗದಲ್ಲಿ ಬಗೆಹರಿಸಿಕೊಳ್ಳತಕ್ಕ ಪ್ರಯತ್ನ ಖಂಡನೀಯ. ಅದು ಆಗಕೂಡದು. ಮತ್ತು ಈಗ ಅಲ್ಲಿ ನಡೆದಿರತಕ್ಕ ಘಟನೆಗಳು ನಮ್ಮ ದೇಶಕ್ಕಾಗಲೀ, ಅಲ್ಲಿಯ ಜನರಿಗಾಗಲಿ ಕೀರ್ತಿಯನ್ನು ತರತಕ್ಕ ಘಟನೆಗಳಲ್ಲ ಬೇರೆ ದೇಶದ ಜನ ಇದರ ಬಗ್ಗೆ ಅಪಾರ್ಥ ಮಾಡಿಕೊಳ್ಳಬಹುದು. ಎರಡೂ ರಾಜ್ಯದಲ್ಲಿರತಕ್ಕ ಜನರು ನಮ್ಮ ದೇಶದ ಸ್ವಾತಂತ್ರ್ಯದ ಬಗ್ಗೆ ಮತ್ತು ಸ್ವಾತಂತ್ರ್ಯ ಬಂದನಂತರ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಬಗ್ಗೆ ಬಹಳ ಪರಾಕ್ರಮದಿಂದ ಹೋರಾಡಿದಂಥವರು. ನಮ್ಮ ದೇಶದ ಮೇಲೆ ಬೇರೆ ದೇಶದ ಆಕ್ರಮಣ ಆದಾಗ ಕೂಡ ಅಲ್ಲಿನ ಯೋಧರಷ್ಟೇ ಅಲ್ಲದೇ ಸಾಮಾನ್ಯ ಜನರೂ ಕೂಡ ಅತ್ಯಂತ ಶೌರ್ಯವನ್ನು, ದೇಶ ಪ್ರೇಮವನ್ನು ತೋರಿಸಿದ್ದಾರೆ ಮತ್ತು ಅಲ್ಲಿ ಮೊದಲಿನಿಂದಲೂ ಎರಡು ಕೋಮುಗಳಲ್ಲಿ ಎಷ್ಟರ ಮಟ್ಟಿಗೆ ಸೌಹಾರ್ದತೆ, ನೆಮ್ಮದಿ ಇತ್ತು ಎಂಬರೆ ಎರಡು ಕೋಮುಗಳು ಎಂದು ಯಾರೂ ಭಾವಿಸುವಂತೆಯೂ ಇರಲಿಲ್ಲ. ಆದರೆ ದುರ್ದೈವದ ಸಂಗತಿ ಎಂದರೆ ಕಾರಣಾಂತರದಿಂದ ಮತ ಭೇಧ ಉಂಟಾಯಿತು. ಉಗ್ರಗಾಮಿಗಳು ಎಂದು ಏನು ಹೇಳುತ್ತೇನೆ ಅವರ ಕೈ ಮೇಲಾಗತಕ್ಕ ದುರದೃಷ್ಟಕರ ಪ್ರಸಂಗ ಒದಗಿದೆ. ನಾವೆಲ್ಲರೂ ಈ ಘಟನೆಗಳ ಬಗ್ಗೆ ಚಿಂತೆಯನ್ನು ವ್ಯಕ್ತಮಾಡುವುದಷ್ಟೇ ಅಲ್ಲ, ಎರಡೂ ರಾಜ್ಯಗಳ ಜನರಿಗೆ ನಾವು ಪ್ರಾರ್ಥನೆ ಮಾಡಿಕೊಳ್ಳಬೇಕು ; ಹಿಂಸಾತ್ಮಕ ಮಾರ್ಗದಿಂದ